بِسْمِ اللّٰهِ الرَّحْمٰنِ الرَّحِيْمِ      نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ      وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 02
ಸಂಚಿಕೆ: 05
ವಾರ್ಷಿಕ ಶುಲ್ಕ ರೂ.500/-
ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**04 ಫೆಬ್ರವರಿ 2021, 04 ತಬ್‌ಲೀಗ್ 1399 ತಬ್‌ಲೀಗ್ ಹಿಜರಿ ಶಮ್‌ಸಿ, 21 ಜಮಾದಿಉಸ್ಸಾನಿ 1442 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا لَا تَتَّخِذُوا الْكٰفِرِيْنَ اَوْلِيَآءَ مِنْ دُوْنِ الْمُؤْمِنِيْنَ ؕ اَتُرِيْدُوْنَ اَنْ تَجْعَلُوْا لِلّٰهِ عَلَيْكُمْ سُلْطٰنًا مُّبِيْنًا (النساء:145)

(ಅನ್ನಿಸಾಅ್:*145*)

ಅಂದರೆ: ಎಲೈ ವಿಶ್ವಾಸಿಗಳೇ, ನೀವು ಸತ್ಯವಿಶ್ವಾಸಿಗಳನ್ನು ಬಿಟ್ಟು ಅವಿಶ್ವಾಸಿಗಳನ್ನು ಮಿತ್ರರನ್ನಾಗಿ ಮಾಡಬಾರದು. ನಿಮ್ಮ ವಿರುದ್ಧ ಸ್ಪಷ್ಟವಾದ ಪುರಾವೆ ಅಲ್ಲಾಹನಗೆ ಸಿಗಲಿ ಎಂದು ನೀವು ಬಯಸುತ್ತೀರಾ?

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸೂರ್ಯ ಗ್ರಹಣದ ಸಂದರ್ಭದಲ್ಲಿ 'ಸದಖಾ'(ದಾನ) ನೀಡುವುದು

ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್(ಸ) ರವರ ಕಾಲಾವಧಿಯಲ್ಲಿ ಸೂರ್ಯ ಗ್ರಹಣ ಉಂಟಾಗಿತ್ತು. ಆಗ ರಸೂಲುಲ್ಲಾಹ್(ಸ) ಜನರಿಗೆ ನಮಾಝ್ ನಿರ್ವಹಿಸಿಕೊಟ್ಟರು. ಅವರು(ಸ) ಸುದೀರ್ಘ ಕಾಲ ನಿಂತುಕೊಂಡರು ತದನಂತರ ಅವರು(ಸ) ರುಕು ಮಾಡಿದರು ಮತ್ತು ಬಹು ಸಮಯದವರೆಗೆ ರುಕುವಿನಲ್ಲಿದ್ದರು. ಮತ್ತೆ ಅವರು ನಿಂತುಕೊಂಡರು. ಪುನಃ ಬಹು ಸುಮದವರೆಗೆ ಇಂತರು ಅವರ ಈ ನಿಲ್ಲುವಿಕೆಯು ಮೊದಲ ಸಮಯಕ್ಕಿಂತಲೂ ಕಡಿಮೆ ಸಮಯದ್ದಾಗಿತ್ತು. ಮತ್ತೆ ಅವರು(ಸ) ರುಕು ಮಾಡಿದರು ಮತ್ತು ಬಹು ಸಮದಯವರೆಗೆ ರುಕುವಿನಲ್ಲಿದ್ದರು. ಈ ರುಕು ಸಹ ಮೊದಲ ರುಕುವಿಗಿಂತ ಕಡಿಮೆ ಸಮಯದ್ದಾಗಿತ್ತು. ಮತ್ತೆ ಅವರು(ಸ) ಸಜ್‌ದಾ (ಸಾಷ್ಟಾಂಗ) ಮಾಡಿದರು ಮತ್ತು ಬಹು ಸಮಯದವರೆಗೆ ಸಜ್‌ದದಲ್ಲಿಯೇ ಇದ್ದರು. ಮತ್ತೆ ಅದೇ ರೀತಿ ಎರಡನೇ ರಕಅತ್‌ನಲಿಯೂ ಸಹ ಪ್ರತಿಪಾದಿಸದಿರು. ಅಂದರೆ ಮೊದಲ ರಕತಿನ ಹಾಗೆಯೇ ಅನುಸರಿಸಿದರು. ಮತೆ ಅವರು(ಸ) ನಮಾಝನ್ನು ಮುಕ್ತಾಯಗೊಳಿಸಿದರು. ಆಗ ಸೂರ್ಯ ನಿಚ್ಚಳಗೊಂಡಿತ್ತು. ಅವರು(ಸ) ಜನರಿಗೆ ಉದ್ದೇಶಿಸಿ ಮಾತನಾಡಿದರು, ಅಲ್ಲಾಹನ ಸ್ತುತಿಸಿ ಹೇಳಿದರು: "ಸೂರ್ಯ ಮತ್ತು ಚಂದ್ರ ಅಲ್ಲಾಹನ ದೃಷ್ಟಾಂತಗಳಲ್ಲಿ ಎರಡು ದೃಷ್ಟಾಂತಗಳಾಗಿವೆ. ಅವು ಯಾರೊಬ್ಬರ ಮರಣ ಅಥವಾ ಜೀವನಕ್ಕೆ ಸಬಂದಿಸಿದ್ದಾಗಿರುವುದಿಲ್ಲ. ಆದುದರಿಂದ ನೀವು ಗ್ರಹಣವನ್ನು ಕಂಡರೆ ಅಲ್ಲಾಹನೊಡನೆ ಪ್ರಾರ್ಥಿಸಿರಿ. ಅವನ ಮಹಿಮೆಯನ್ನು ಕೊಂಡಾಡಿರಿ. ಮತ್ತು ಆರಾಧನೆ(ನಮಾಝ್) ಕೈಗೊಳ್ಳಿರಿ, ದಾನ (ಸದಖಾ) ನಿಡಿರಿ, ಅದೇ ರೀತಿ ಅವರು(ಸ) ಹೇಳಿದರು: ಓ ಮುಹಮ್ಮದಿನ ಸಮುದಯವೇ! ಅಲ್ಲಾಹನಿಗಿಂತ ಸ್ವಾಭಿಮಾನಿ ಯಾರೂ ಇಲ್ಲ ಅವನ ದಾಸನಾಗಲಿ ಅಥವಾ ಅವನ ದಾಸೆಯಾಗಿರಲಿ, ವ್ಯಭಿಚಾರದಲ್ಲಿ ತೊಡಗುವುದು ಮೆಚ್ಚುವುದಿಲ್ಲ. ಓ ಮುಹಮ್ಮದಿನ ಸಮುದಾಯವೇ! ಅಲ್ಲಾಹನಾಣೆ, ನಾನು ಅರಿತದ್ದನ್ನು ನೀವು ಅರಿಯುವವರಾಗಿದ್ದಲ್ಲಿ ನಿಸ್ಸಂದೇಹವಾಗಿಯು ನೀವು ಕಡಿಮೆ ಪ್ರಮಾಣದಲ್ಲಿ ನಗುವಿರಿ ಮತ್ತು ಹೆಚ್ಚು ಪ್ರಮಾಣದಲ್ಲಿ ಅಳುತ್ತಿರುವಿರಿ.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬ್ ಅಲ್‌ಕುಸೂಫ್, ಮುದ್ರಣ ಖಾದಿಯಾನ್ 2006)**

**ರಸೂಲುಲ್ಲಾಹ್ (ಸ) ರವರ ಕಾರಣದಿಂದಾಗಿ ಒಂದು ಅದ್ವಿತೀಯ ಕ್ರಾಂತಿ ಮತ್ತು ಮಹೋನ್ನತವಾದ ಪರಿವರ್ತನೆ ಉಂಟಾಯಿತು. ಅಲ್ಲಾಹ್ ! ಅಲ್ಲಾಹ್ ! ಇದು ಎಷ್ಟೊಂದು ಮಹಿಮೆಯ ಮಾತಾಗಿದೆ.**

**ಸೃಷ್ಟಿಗಳ ಹಕ್ಕಗುಳು ಮತ್ತು ಅಲ್ಲಾಹನ ಹಕ್ಕಗಳು ತಕ್ಕಡಿಯ ಎರಡು ತಟ್ಟೆಯ ಸಮಾನ ರೂಪದಲ್ಲಿ ಸ್ಥಾಪಿಸಿದರು. ಮೃತ ಆಹಾರಿಯನ್ನು ಮತ್ತು ಮೃತ ಸಮುದಾಯವನ್ನು ಒಂದು ಉನ್ನತ ದರ್ಜೆಯ ಜೀವಂತ ಹಾಗೂ ಪರಿಶುದ್ಧ ಸಮುದಾಯವನ್ನಾಗಿ ಮಾಡಿದರು.**

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

"ಸಂಸ್ಕೃತ ಇತ್ಯಾದಿ ಭಾಷೆಗಳು ಮರಣ ಹೊಂದಿದ ಶವಗಳಂತಾಗಿದೆ. ಅದರ ಗ್ರಂಥಗಳಾಗಲಿ ಏನೂ ಉಳಿಯಲಿಲ್ಲ. ಅದೇ ರೀತಿಯ ಅವಸ್ಥೆ ಕ್ರೈಸ್ತರದ್ದಾಗಿದೆ. ಅವರ ಪವಿತ್ರ ಗ್ರಂಥವಾದ ಇಂಜೀಲಿನೆಡೆ ಅದರ ಮಾತೃಭಾಷೆಯ ಕಡೆ ಗಮನವೇ ಹರಿಸಲಿಲ್ಲ...... ಅಂದ ಹಾಗೆ ಇಸ್ಲಾಮಿನ ಪ್ರತಿ ಅವರ ಆತಂಕ ನೋಡಿ ಸಖೇದ ಆಶ್ಚರ್ಯವಾಗುತ್ತದೆ. ಇಸ್ಲಾಮಿನ ದೇವರೇನು ಕೃತಕ ದೇವನಲ್ಲ, ಬದಲು ಸದಾ ಜೀವಂತವಿರುವ ಸಶಕ್ತ ದೇವನಾಗಿದ್ದಾನೆ. ಅಂತೆಯೇ ಪ್ರವಾದಿತ್ವದತ್ತ ನೋಡಿರಿ. ಅದರ ಮುಲ ಉದ್ದೇಶ ಏನಾಗಿದೆ?

ಒದಲಾಗಿ ಹೇಳಬೇಕೆಂದರೆ ಪ್ರವಾದಿಯು ಸಮಯಕ್ಕೆ ಅನುಗುಣವಾಗಿ ಆಗಮಿಸಬೇಕು ಮತ್ತು ಅದರ ಅಗತ್ಯತೆಯನ್ನು ಪರಿಪೂರ್ಣ ರೀತಿ ನಿಭಾಯಿಸಬೇಕು. ಈ ಶ್ರೇಯವು ಸಹ ನಮ್ಮ ಪ್ರವಾದಿ ಮುಹಮ್ಮದ್(ಸ) ರವರಿಗೆ ಸಲ್ಲುತ್ತದೆ. ಪ್ರವಾದಿ ಮುಹಮ್ಮದ್(ಸ) ರವರು ಆಗಮಿಸಿದಾಗ ಅರಬ್ ಹಾಗೂ ಲೋಕದ ಸ್ಥಿತಿಗತಿಯೂ ಯಾರಿಂದಲು ಗೌಪ್ಯವಾಗಿರಲಿಲ್ಲ. ಅಪ್ಪಟ ಮೃಗಗಳ ಸಮಾನರಾಗಿದ್ದರು. ಊಟ ವಿನೋದ ಹೊರತು ಏನೂ ತಿಳಿದಿರಲಿಲ್ಲ. ಸೃಷ್ಟಿಗಳ ಹಕ್ಕುಗಳೆಂದರೇನು, ಅಲ್ಲಾಹನ ಹಕ್ಕುಗಳೆಂದರೇನು ಯಾವುದೂ ತಿಳಿದಿರಲಿಲ್ಲ. ಅಂದ ಹಾಗೆ ಅಲ್ಲಾಹನು ಒಂದೆಡೆ ಇದರ ಚಿತ್ರಣ ಹೀಗೆ ನಿಡಿದನು: **ಯಕುಲೂನ ಕಮಾ ತಅ್‌ಕುಲುಲ್ ಅನ್‌ಆಮು** (ಸೂರಃ ಮುಹಮ್ಮದ್–13) ಅದರೊಂದಿಗೆ ಪ್ರವಾದಿ ಮುಹಮ್ಮದ್(ಸ) ರವರ ಶಿಕ್ಷಣವು ಯಾವ ರೀತಿ ಪರಿಣಾಮ ಬೀರಿತು ಎಂದರೆ **"ಲಬೀತೂನ ಲಿರಬ್ಬಿಹಿಮ್ ಸುಜ್ಜದವ್ವಖಿಯಾಮ"** (ಅಲ್–ಫುರ್ಖಾನ್–65)ನ ಸ್ಥಿತಿಯಾಯಿತು. ಅಂದರೆ ಅವರು ರಾತ್ರಿಯ ಹೊತ್ತನ್ನು ತಮ್ಮ ಪ್ರಭುವಿನ ಮುಂದೆ 'ಸಜದ' ಮಾಡುತ್ತಲೂ ಮತ್ತು ನಿಂತು ಪ್ರಾರ್ಥಿಸುತ್ತಲೂ ಕಳೆಯುತ್ತಿದ್ದರು. ಅಲ್ಲಾಹ್ ! ಅಲ್ಲಾಹ್ ! ಇದು ಎಷ್ಟೊಂದು ಮಹೋನ್ನತವಾದ ಅನುಗ್ರಹವಾಗಿದೆ. ರಸೂಲುಲ್ಲಾಹ್(ಸ) ರವರ ಕಾರಣದಿಂದಾಗಿ ಒಂದು ಅದ್ವಿತೀಯ ಕ್ರಾಂತಿ ಮತ್ತು ಮಹೋನ್ನತವಾದ ಪರಿವರ್ತನೆ ಕಾಣುವಂತಾಯಿತು. ಸೃಷ್ಟಿಗಳ ಹಕ್ಕಗುಳು ಮತ್ತು ಅಲ್ಲಾಹನ ಹಕ್ಕಗಳು ತಕ್ಕಡಿಯ ಎರಡು ತಟ್ಟೆಯ ಸಮಾನ ರೂಪದಲ್ಲಿ ಸ್ಥಾಪಿಸಿದರು. ಮೃತ ಆಹಾರಿಯನ್ನು ಮತ್ತು ಮೃತ ಸಮುದಾಯವನ್ನು ಒಂದು ಉನ್ನತ ದರ್ಜೆಯ ಜೀವಂತ ಹಾಗೂ ಪರಿಶುದ್ಧ ಸಮುದಾಯವನ್ನಾಗಿ ಮಾಡಿದರು. ಗುಣಗಳು ಎರಡು ರೀತಿಯದ್ದಾಗಿರುತ್ತದೆ: ನೀತಿ ಅಥವಾ ನಡತೆ, ನತಡೆಯ ದೆಶೆ ಎಂದರೆ **ಯಬೀತೂನ ಲಿರಬ್ಬಿಹಿಮ್ ಸುಜ್ಜದೌಂ ವ ಖಿಯಾಮಾ** (ಅಲ ಫುರ್ಖಾನ್–65) ಮತ್ತು ನೀತಿ ಶಿಕ್ಷಣದ ದಶೆ ಎಂದರೆ ಎಷ್ಟೊಂದು ಯಥೇಚ್ಛ ರೀತಿಯಲ್ಲಿ ಗ್ರಂಥ ರಚನೆ ಮತ್ತು ಭಾಷಾಭಿವೃದ್ಧಿ ಸೇವೆ ಜಾರಿಯಲ್ಲಿದೆ ಎಂದರೆ ಅದರ ಉದಾಹರಣೆಯೂ ದೊರೆಯದಂತಾಗಿದೆ.

ಇನ್ನೊಂದೆಡೆ ಕ್ರೈಸ್ತರ ಕಡೆ ನೋಡುತ್ತೇನೆ. ನನಗೆ ಆಶ್ಚರ್ಯವಾಗುತ್ತದೆ. ಯೇಸು ಕ್ರೈಸ್ತರನ್ನು ನಂಬಿದ ಅವರ ಹಿಂಬಾಲಕರು (ಹವಾರಿಗಳು) ಯಾವ ಪ್ರಗತಿ ಸಾಧಿಸಿದ್ದಾರೆ. ಯಹೂದ ಸ್ತ್ರೀಯೋತಿ ಯೇಸುವಿನ ಖಜಾಂಚಿಯಾಗಿದ್ದ, ಬೇಕಾದಾಗಲೆಲ್ಲ ಹಣ ದೋಚುತ್ತಿದ್ದ ಮತ್ತು ಮೂವತ್ತು ರೂಪಾಯಿಗಳನ್ನು ಪಡೆದು ತಮ್ಮ ಗುರುವನ್ನೇ ಹಿಡಿದು ಒಪ್ಪಿಸಿದ ಎಂದರೆ ಯಾವ ರೀತಿಯ ನಂಬಿಕೆಯಾಗಿತ್ತು ಎಂದು ಸ್ಪಷ್ಟವಿದೆ. ಯೇಸುವಿನ ಬಳಿ ಎರಡು ಸಾವಿರ ರೂಪಾಯಿಗಳಿದ್ದವು. ಅವರ ಸ್ಥಿತಿ ಹೀಗಿದ್ದರೆ ಅದರ ಎದುರಾಗಿ ರಸೂಲುಲ್ಲಾಹ್(ಸ) ರವರನ್ನು ನೋಡಿದರೆ ಅವರ(ಸ) ಸ್ಥಿತಿ ಹೇಗಿತ್ತೆಂದರೆ, ಅಂತಿಮ ಸಮಯದಲ್ಲಿ ಕೇಳಲಾಯಿತು. ಮನೆಯಲ್ಲಿ ಏನು ಉಳಿದಿದೆ? ಆಯಿಶಾ ಸಿದ್ದೀಖ(ರ) ಹೇಳುತ್ತಾರೆ: ಕೇವಲ ಒಂದು ದೀನಾರ್ ಇದೆ. ಅದಕ್ಕೆ ಪ್ರವಾದಿ(ಸ)ರು ಹೇಳಿದರು. ಅದನ್ನು ಸಹ ಹಂಚು ಬಿಡಿ. ಅಲ್ಲಾಹನ ಪ್ರವಾದಿಯಾಗಿ ತನ್ನ ಪ್ರಭುವಿನೆಡೆ ಹೊರಟಾಗ ಅವನ ಮನೆಯಲ್ಲಿ ಒಂದು ದೀನಾರ್ ಬಿಟ್ಟು ಹೋಗುವೆನು.

**(ಮಲ್ಫೂಝಾತ್, ಸಂಪುಟ 1, ಪುಟ–249–250, ಮುದ್ರಣ ಖಾದಿಯನ್ 2018)**

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

**ನನ್ನ ಆಹ್ವಾನದ ಬಗ್ಗೆ ಆಕ್ಷೇಪ ಮಾಡುವ ಮುಲ್ಲಾಗಳು ಈ ಕಾಲದ ಯಾವುದೇ ಪಾದ್ರಿಯರನ್ನು ನನ್ನ ಮುಂದೆ ತಂದು ಈ ವಿಧಾನದ ಪ್ರಕಾರ ಪರೀಕ್ಷಿಸಿ ನೋಡಲಿ, ನಾನು ಪರಾಜಿತನಾದರೆ ಎಲ್ಲ ಆಸ್ತಿಗಳು ಅವರಿಗೆ ಒಪ್ಪಿಸುವೆನು.**

ಈ ಪಂಥಹ್ವಾನ ನಾವು ಸಯ್ಯದ್‌ನ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇರು ಕೃತಿ ಆಯಿನ ಕಮಾಲಾತೆ ಇಸ್ಲಾಮ್‌ನಿಂದ ಪ್ರಸ್ತುತಪಡಿಸುತ್ತಿದ್ದೇವೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ)ರವರು ಈ ಗ್ರಂಥದಲ್ಲಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರವರು ಹಝ್ರತ್ ಮಸೀಹ್ ಮೌಊದ್ (ಅ)ರವರಿಗೆ ಬರೆದಿರುವ ಒಂದು ಪತ್ರವನ್ನು ಪ್ರಕಟಗೊಳಿಸಿದರು. ಆ ಪತ್ರದಲ್ಲಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರವರು ಬರೆದರು: ನೀವು 'ಮಸೀಲೆ ಮಸೀಹ್' ಆಗುವ ದಾವೆಯಿಂದ ಈವರೆಗಿನ ಸ್ಥಿತಿ ತುಂಬ ಸಂಶಯಾತ್ಮಕವಾಗಿದೆ. ಒಮ್ಮೊಮ್ಮೆ ನೀವು ಮಾಡಿರುವ ದಾವೆಯು ಸರಿಯಾಗಿದೆ ಎಂದು ಕಂಡು ಬಂದರೆ ಒಮ್ಮೊಮ್ಮೆ ಸಂಶಯಗಳು ಆವರಿಸಿಕೊಳ್ಳುತ್ತವೆ. ಆದುದರಿಂದ ಸತ್ಯತೆಯನ್ನು ಸಾಬೀತುಪಡಿಸಲು ಈ ಕೆಳಗೆ ನಮೂದಿಸಿದ ಕಾರ್ಯಗಳು ಆಗಬೇಕಾಗಿದೆ. 1) ವಿರೋಧಿಗಳನ್ನು ಮುಬಾಹಲಕ್ಕೆ (ಪ್ರಾರ್ಥನಾ ಸಮರಕ್ಕಾಗಿ) ಆಹ್ವಾನಿಸಬೇಕು. 2) ಯಾವುದೇ ಕಾರ್ಯ ಚಮತ್ಕಾರದಿಂದ ಕೂಡಿರಬೇಕು ಅದು ಜನರಿಗೆ ನ್ಯಾಯತೀರ್ಪು ನೀಡುವಂತಿರಬೇಕು. ಅದಕ್ಕೆ ಉತ್ತರ ನೀಡುವ ಮೊದಲು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ)ರವರು ಈ ವಿವರಣೆ ನೀಡಿದರು. ಈ ಪತ್ರ ನವಾಬ್ ಸಾಹಿಬ್ ಅವರ ಇನ್ನೊಬ್ಬ ಸತ್ಯಾನ್ವೇಷಕರಿಗೆ ಬರೆದಿದ್ದೇನೆಯೇ ವಿನಃ ಸ್ವಯಂ ನವಾಬ್ ಸಾಹಿಬ್ ಇಮಾಮರೊಂದಿಗೆ ಒಂದು ವಿಶೇಷವಾದ ಪ್ರೀತಿಯ ಸಂಬಂಧ ಹೊಂದಿರುವರಾಗಿದ್ದಾರೆ ಮತ್ತು ಈ ಸಂಘಟನೆಗೆ ಆತ್ಮೀಯರಾಗಿದ್ದರು. ಅನಂತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಆ ಪತ್ರಕ್ಕೆ ಉತ್ತರ ಬರೆದರು ಮತ್ತು ಎಲ್ಲ ಕಾರ್ಯಗಳ ವಿವರಣೆಯ ಜೊತೆಗೆ ತನ್ನ ಸತ್ಯತೆಯ ಕುರಿತು ಐದು ಸಾಕ್ಷ್ಯಗಳು ಸಹ ವಿವರಿಸಿಕೊಟ್ಟರು. ಉತ್ತರ ಬರೆಯುವುದಕ್ಕೆ ಮೊದಲು ಬರೆದರು. ಈ ಪತ್ರವನ್ನು ಕನಿಷ್ಠಪಕ್ಷ ಮೂರು ಸಲ ಗಮನವಹಿಸಿ ಓದಿ, ಈ ಪತ್ರವು ನೋಡಲಿಕ್ಕೆ ನಿಮ್ಮ ಹೆಸರಿಗಿದೆ. ಆದರೆ ಇದರ ಹಲವು ಬರವಣಿಗೆ ಇತರರ ಸಂಶಯಗಳನ್ನು ದೂರ ಮಾಡಲಿಕ್ಕಿದೆ. ಸಯ್ಯದ್‌ನ ಹಜ್‌ರತ್ ಮಸೀಹ್ ಮೌಊದ್(ಅ) ತನ್ನ ಸತ್ಯತೆ ಕುರಿತು ನಾಲ್ಕು ಪುರಾವೆಯನ್ನು ವಿವರಿಸಿದರು. ಅದರಲ್ಲಿ ಅವರು ಮೇಲ್ಕಾಣಿಸಿದ ಗಾಂಭೀರ್ಯ ಭರಿತ ಬಹುಮಾನಾಧಾರಿತವಾದ ಪಂಥಹ್ವಾನ ತಿಳಿಸಿದರು. ಈ ಕೆಳಗೆ ಅವರು ವಿವರಿಸಿದ 5 ಸತ್ಯಸಾಕ್ಷ್ಯಗಳನ್ನು ಬರೆಯಲಾಗುತ್ತದೆ. ಅವರು ಹೇಳುತ್ತಾರೆ:

"ಸತ್ಯ ಅನ್ವೇಷಿಯಾದವನು ಒಂದು ಪ್ರಶ್ನೆ ಇಲ್ಲಿ ಮಾಡಬಹುದಾಗಿದೆ. ಅದೇನೆಂದರೆ –– ಮಸೀಹ್ ಮೌಊದ್ ಎಂದು ಒಪ್ಪಿಕೊಳ್ಳಲು ಯಾವ ಸಾಕ್ಷ್ಯಗಳಿವೆ. ಏಕೆಂದರೆ ಯಾವುದೇ ಸತ್ಯವಾದಿಯನ್ನು ಪರೀಕ್ಷಿಸಲು ಸತ್ಯತೆಯ ಕುರಿತು ಸಾಕ್ಷ್ಯಗಳಿರುತ್ತವೆ. ವಿಶೇಷವಾಗಿ ಇಂದಿನ ಕಾಲದಲ್ಲಿ ಅದು ಮೋಸ ವಂಚನೆ ಅಪ್ರಮಾಣಿಕತೆಯಿಂದ ಕೂಡಿದೆ ಮತ್ತು ಮಿಥ್ಯವಾದಿಗಳ ಅರ್ಭಟ ಜೋರಾಗಿದೆ. ಈ ಪ್ರಶ್ನೆಯ ಉತ್ತರದಲ್ಲಿ ನನಗೆ ಹೇಳಲಿಕ್ಕಿರುವುದು, ಕೆಳಗೆ ನಮೂದಿತ ಮಾತುಗಳು ಸತ್ಯಾನ್ವೇಷಕರಿಗೆ ಸತ್ಯವನ್ನು ತಿಳಿಯಲು ಮೆಟ್ಟಿಲುಗಳಾಗಿವೆ ಎಂದು.

1) ಮೊದಲನೆಯದಾಗಿ ರಸೂಲುಲ್ಲಾಹ್(ಸ) ಅವರ ನಿರಂತರವಾದ ಭವಿಷ್ಯವಾಣಿಗಳು ಅರ್ಥವತ್ತಾಗಿದೆ. ಅದರ ಅರ್ಥವೇನೆಂದರೆ ಅಲ್ಲಾಹನು ವಾಗ್ದಾನ ನೀಡಿರುವನು. ಪ್ರತಿಯೊಂದು ಶತಮಾನದಲ್ಲಿ ಧರ್ಮವನ್ನು ಪುನಃಶ್ಚೇತನಗೊಳಿಸಲು, ಅದರ ದೌರ್ಬಲ್ಯಗಳನ್ನು ದೂರಿಕರಿಸಲು ಮತ್ತೆ ಅದನ್ನು ವಾಸ್ತವರೂಪದಲ್ಲಿ ಪುನಃ ತರಲು ಒಬ್ಬ ಸುಧಾರಕರನ್ನು ಕಳುಹಿಸುವನು. ಈ ಭವಿಷ್ಯವಾಣಿಯ ಪ್ರಕಾರ ಈ ಹದಿನಾಲ್ಕನೆಯ ಶತಮಾನದಲ್ಲೂ ಅಂತಹ ಒಬ್ಬ ಸುಧಾರಕನ ಆಗಮನ ಅವಶ್ಯವಾಗಿತ್ತು. ಅವರು ಧರ್ಮದಲ್ಲಿ ಉಂಟಾದ ನ್ಯೂನತೆಗಳನ್ನು ಹೋಗಲಾಡಿಸಬೇಕಾಗಿತ್ತು. ಆದುದರಿಂದ ಈ ವಿನೀತನು ಸರಿಯಾದ ಸಮಯಕ್ಕೆ ನಿಯುಕ್ತಿಗೊಂಡಿರುವನು. ಇದಕ್ಕಿಂತ ಮುಂಚೆ ನೂರಾರು ಸೂಫಿ ಸಂತರು ತನ್ನ ದೇವವಾಣಿಯ ಮೂಲಕ ಸಾಕ್ಷ್ಯ ನೀಡಿರುವರು. ಹದಿನಾಲ್ಕನೆ ಶತಮಾನದ ಸುಧಾರಕನು ವಾಗ್ದತ್ತ ಮಸೀಹ್ ಆಗಿರುವನು. ಸಹೀ ಹದೀಸುಗಳು ಸ್ಪಷ್ಟ ರೂಪದಲ್ಲಿ ಸಾಧರಪಡಿಸುತ್ತಿವೆ. ಹದಿಮೂರನೇ ಶತಮಾನದ ನಂತರ ಮಸೀಹನು ಆಗಮಿಸುವನು. ವಿನೀತನ ಈ ದಾವೆ ಸರಿಯಾದ ಸಮಯಕ್ಕನುಗುಣವಾಗಿದೆ. ತರ್ಕಬದ್ಧವಾಗಿದೆ. ರಸೂಲುಲ್ಲಾಹ್(ಸ) ರವರ ವಚನ ಸುಳ್ಳಾಗಲು ಸಾಧ್ಯವೆ? ನಾನು ಈ ಮಾತನ್ನು ಸಾಬೀತುಗೊಳಿಸಿದ್ದೇನೆ. ಹದಿನಾಲ್ಕನೆ ಶತಮಾನದ ತುದಿಯಲ್ಲಿ ವಾಗ್ಧತ್ತ ಮಸೀಹ ಆಗಮಿಸದಿರುತ್ತಿದ್ದರೆ ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗಳು ನಿರರ್ಥಕಗೊಳ್ಳುತ್ತಿದ್ದವು ಮತ್ತು ನುರಾರು ಸೂಫಿ ಸಂತರ ದೇವವಾಣಿಗಳು ಮಿಥ್ಯವಾಗುತ್ತಿದ್ದವು.

2) ಈ ವಿಷಯ ಯೋಚಿಸಲು ಅರ್ಹವಾಗಿದೆ. ಉಲಮಾಗಳಿಗೆ ಹದಿನಾಲ್ಕನೆ ಶತಮಾನದ ಮುಜದ್ದೀದ್ (ಧರ್ಮಸುಧಾರಕ) ನನ್ನ ಹೊರತು ಯಾರು ದಾವೆ ಹೂಡಿರುವರು? ಯಾರು ಅಲ್ಲಾಹನ ಸೂಚನೆ ಅನುಸಾರ ಬಂದವನೆಂದು ಹೇಳಿರುವನು. ಮತ್ತು ಯಾರು ದೇವವಾಣಿ ಪಡೆಯುವ ಹಾಗೂ ಅಲ್ಲಾಹನ ವತಿಯಿಂದ ನಿಯುಕ್ತಿಗೊಳ್ಳುವ ದಾವೆ ಮಾಡಿರುವನು ಎಂದು ಪ್ರಶ್ನಿಸುವಾಗ ಉತ್ತರ ಮೌನವೆ ದೊರೆಯುತ್ತದೆ. ಇಂತಹ ಯಾವೊಬ್ಬ ವ್ಯಕ್ತಿಯನ್ನು ತೃಪ್ತಿಪಡಿಸಿರಲಿಲ್ಲ ಎಂದು ನೆನಪಿಡಬೇಕು. ಮಸೀಹ್ ಮೌಊದ್ ಆಗುವ ದಾವೆಯೂ ಅಲ್ಲಾಹನ ವಾಣಿ (ದೇವವಾಣಿ) ಪಡೆಯುವುದಕ್ಕಿಂತ ಮತ್ತು ಅಲ್ಲಾಹನಿಂದ ಮುಜದ್ದೀದ್ (ಧರ್ಮ ಸುಧಾರಕ) ನ ದಾವೆಗಿಂತ ದೊಡ್ಡದೇನಲ್ಲ ಎಂದು ಸ್ಪಷ್ಟವಾಗಿದೆ. ಯಾರಿಗೆ ಸ್ಥಾನಮಾನ ದೊರೆಯುತ್ತದೆ ಅವನು ದೇವವಾಣಿ ಪಡೆಯುವವನು, ಅವನು ಅಲ್ಲಾಹನಿಂದ ನಿಯುಕ್ತಿಗೊಳ್ಳುವನು. ಅವನು ಸಾದೃಶ್ಯ ಮಸೀಹನಾಗಲಿ, ಸಾದೃಶ್ಯ ಮೂಸಾ ಆಗಲಿ, ಇವೆಲ್ಲ ಹೆಸರುಗಳಿಗೆ ಅವನು ಅರ್ಹನಾಗಿರುವನು. ಸಾದೃಶ್ಯ ಆಗುವುದು ವಾಸ್ತವದಲ್ಲಿ ಅನುಗ್ರಹವಲ್ಲ. ಬದಲು ವಾಸ್ತವದ ಅನುಗ್ರಹವು ಅಲ್ಲಾಹನ ವಾಣಿ ಪಡೆಯುವುದರಲ್ಲಿ ಮತ್ತು ಅವನ ಸಂಬಂಧದಲ್ಲಾಗಿದೆ. ಅಂದ ಹಾಗೆ ಯಾವ ವ್ಯಕ್ತಿಗೆ ದೈವವಾಣಿ ಲಭಿಸಿದೆಯೋ ಅವನು ಅಲ್ಲಾಹನಿಂದ ನಿಯುಕ್ತಿಗೊಳ್ಳುವ ಅನುಗ್ರಹ ಪಡೆದಿರುವನಾಗುತ್ತಾನೆ. ಅಂದ ಹಾಗೆ ಅಲ್ಲಾಹನು ಕಾಲಕ್ಕನುಗುಣವಾಗಿ ಯಾವ ಹೆಸರಿನಿಂದಲೂ ಹೆಸರಿಸಬಹುದಾಗಿದೆ. ಹೆಸರನ್ನು ನೀಡುವುದು ಮಹಾ ಕಾರ್ಯವೇನಲ್ಲ. ಇಸ್ಲಾಮ್ ಧರ್ಮದಲ್ಲಿ ಮೂಸ, ಈಸಾ, ದಾವೂದ್, ಸುಲೈಮಾನ್, ಯಾಅಕೂಬ್ ಇತ್ಯಾದಿ ಹಲವು ನಬಿಗಳ ಹೆಸರುಗಳನ್ನು ಜನರು ಇಟ್ಟುಕೊಳ್ಳುತ್ತಾರೆ. ಈ ಹೆಸರುಗಳಿಂದ ಅವರ ಕರ್ಮಸಾಧ್ಯತೆ ಲಭಿಸುವಂತಾಗಲಿ ಎಂಬ ಸದುದ್ದೇಶದಿಂದ ಇಡುತ್ತಾರೆ. ಹೀಗಿರುವಾಗ ಅಲ್ಲಾಹನು ಯಾವುದೇ ಕಾರ್ಯಸಾಧ್ಯತೆಗಾಗಿ ತನ್ನ ವಾಣಿಯುನ್ನು ದಯಪಾಲಿಸುತ್ತ ಯಾರದೋ ಸುಧಾರಣೆಗೆ ಕಾಲಕ್ಕನುಗುಣವಾಗಿ ತಕ್ಕದಾದ ಹೆಸರಿನಿಂದ ಕರೆಯುವುದರಲ್ಲಿ ತಪ್ಪೇನಿದೆ? (ಆಯಿನ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಯಿನ್ ಸಂಪುಟ 5, ಪುಟ 340–341)

(3) ಮೂರನೇ ಚಿಹ್ನೆ: ಈ ವಿನೀತನು ಸತ್ಯವಾದಿಯಾಗಲು ಕಾರಣವೇನೆಂದರೆ ಹಲವು ಸಜ್ಜನರು ಪೂರ್ವ ಕಾಲದಿಂದಲೇ ನನ್ನ ಆಗಮನ ಕುರಿತು ಶುಭವಾರ್ತೆ ನೀಡಿರುವರು. ಎಲ್ಲಿಯವರೆಗೆ ಅಂದರೆ ನನ್ನ ಹೆಸರು, ವಾಸ ಮತ್ತು ವಯಸ್ಸು ಕುರಿತು ಉಲ್ಲೇಖಗಳು ದೊರೆಯುತ್ತವೆ. ಅದನ್ನು ನಾನು "ನಿಶಾನೆ ಆಸ್ಮಾನಿ: ಗ್ರಂಥದಲ್ಲಿ ಬರೆದಿರುತ್ತೇನೆ.

(4) ನಾಲ್ಕನೆ ಚಿಹ್ನೆ: ಈ ವಿನೀತನ ಸತ್ಯವಾದಿ ಆಗುವ ಕುರಿತು. ಈ ವಿನೀತನು ಹನ್ನೆರಡು ಸಾವಿರ ಸಮೀಪ ಪತ್ರಗಳು ಮತ್ತು ಜಾಹೀರಾತುಗಳನ್ನು "ದೇವವಾಣಿಯ ಅನುಗ್ರಹಗಳು ಸಾದಾರಪಡಿಸಲು ಪಂಥಹ್ವಾನ ನೀಡಿ ಇತರ ಧರ್ಮೀಯರಿಗೆ ಬರೆದಿರುವೆನು ವಿಶೇಷವಾಗಿ ಪಾದರಿಗಳಲ್ಲಿ ಬಹುಶಃ ಯೂರೋಪ್, ಅಮೇರಿಕಾ ಮತ್ತು ಭಾರತದಲ್ಲಿ ಒಬ್ಬನೇ ಒಬ್ಬ ಹೆಸರಾಂತ ಪಾದರಿಯನ್ನು ಬಿಡದೆ ನಾನು ರಿಜಿಸ್ಟರ್ ಮೂಲಕ ಪತ್ರ ಕಳುಹಿಸಿರುವೆನು. ಆದರೆ ಅವರೆಲ್ಲರ ಮೇಲೆ ಸತ್ಯದ ಪ್ರತಾಪ ಪ್ರಭಾವ ಬೀರಿದೆ. ನನ್ನ ಸಮುದಾಯದ ಮುಲ್ಲ ಮೌಲ್ವಿಗಳು ನನ್ನ ಈ ಕರೆಯ ಕುರಿತು ಟೀಕೆ ಟಿಪ್ಪಣಿ ಮಾಡುತ್ತಾರೆ. ಮಿಥ್ಯಾರೋಪ ದುರ್ವರ್ತನೆ ತೋರಿಸುತ್ತಿದ್ದಾರೆ. ನನಗೆ ಸ್ಪಷ್ಟರೂಪದಲ್ಲಿ ಶುಭವಾರ್ತೆ ನೀಡಲಾಗಿದೆ. ಯಾರಾದರೂ ನನ್ನ ವಿರೋಧಿ ನನ್ನ ಎದುರಿಗೆ ಪ್ರತಿಪಾದಿಸಲು ಬಂದರೆ ನಾನೇ ವಿಜಯಿಯಾಗುವೆನು. ಅವರು ಪರಾಜಿತರಾಗುವರು. ಅಂದ ಹಾಗೆ ಮುಸಲ್ಮಾನರೆಂದು ಹೇಳಿಕೊಳ್ಳುವವರು ನನ್ನ ಕುರಿತು ಸಂಶಯದಲ್ಲಿದ್ದಾರೆ. ಏಕೆ ಯಾವನೇ ಒಬ್ಬ ಪಾದರಿ ನನ್ನೊಡನೆ ಪ್ರತಿಪಾದಿಸಲು ತಯಾರು ಮಾಡುತ್ತಿಲ್ಲ. ಯಾರೇ ಪಾದರಿ ಅಥವಾ ಹಿಂದೂ ಪಂಡಿತನಿಗೆ ಹೇಳಿರಿ. ಈ ವ್ಯಕ್ತಿ ಸುಳ್ಳುಗಾರನಾಗಿದ್ದಾನೆ. ಇವನ ಜೊತೆ ಪ್ರತಿಪಾದಿಸುವುದರಲ್ಲಿ ಯಾವ ನಷ್ಟವು ಇಲ್ಲ. ನಾವು ಜವಾಬ್ಧರರಾಗಿದ್ದೇವೆ.

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೀವೆಲ್ಲರೂ ಸೇರಿಕೊಂಡು ಅಲ್ಲಾಹನ ಪಾಶವನ್ನು, ಹಗ್ಗವನ್ನು ಗಟ್ಟಿಯಾಗಿ ಹಿಡಿಯಿರಿ. ಪರಸ್ಪರ ಭಿನ್ನತೆ ಉಂಟುಮಾಡಬೇಡಿರಿ. ಏಕೆಂದರೆ ನಾನು ಹಝ್ರತ್ ಪೈಗಂಬರರಿಂದ(ಸ) ಹೀಗೆ ಆಲಿಸಿದ್ದೇನೆ: ಅನ್ಯೋನ್ಯ ಸಂಬಂಧಗಳನ್ನು ಸುಧಾರಿಸುವುದು ಐಚ್ಛಿಕ ನಮಾಝ್‌ಗಳು ಮತ್ತು ಉಪವಾಸಕ್ಕಿಂತ ಉತ್ತಮವಾದುದಾಗಿದೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಒಳ್ಳೆಯ ಮಾತುಗಳನ್ನು ಉಪದೇಶಿಸುವುದನ್ನು ಮತ್ತು ಕೆಟ್ಟ ಕೆಲಸಗಳಿಂದ ಜನರನ್ನು ತಡೆಯುವುದನ್ನು ಎಂದಿಗೂ ಬಿಟ್ಟುಬಿಡಬೇಡಿರಿ. ಇಲ್ಲದಿದ್ದರೆ, ನಿಮ್ಮಲ್ಲಿ ನಿಕೃಷ್ಟರು ನಿಮ್ಮ ಅಧಿಕಾರಿಗಳಾಗುವರು. ಇದು ಪ್ರಧಾನವಾದ ಸಂಗತಿಯಾಗಿದೆ. ಅನಂತರ ನೀವು ದುಆ ಮಾಡಿದರೆ, ನಿಮ್ಮ ಪ್ರಾರ್ಥನೆಗಳು ಸ್ವೀಕರಿಸಲ್ಪಡದು. ಇದು ಈಗಿನ ಮುಸ್ಲಿಂ ರಾಷ್ಟ್ರಗಳ ಸ್ಥಿತಿಯಾಗಿದೆ.**

**ಈ ವರ್ಷವು ಜಮಾಅತಿಗೆ ಮತ್ತು ಲೋಕದ ಜನರಿಗೆ ಅನುಗ್ರಹೀತವಾಗಲಿ.**

**ಅಸ್ತ್ರಗಳ ಮೂಲಕ ಮಾಡಲಾಗುವ ಯುದ್ಧ ಸಹ ನಡೆಯುವ ದಿನಗಳು ದೂರವಲ್ಲ**

**ಜನರಿಗೆ ಮತ್ತು ಲೋಕಕ್ಕೆ ಮನವರಿಕೆ ಆಗುವ ರೀತಿಯಲ್ಲಿ ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುವಾಗಲೇ ಈ ವರ್ಷ ಅನುಗ್ರಹೀತವಾಗುವುದು**

**ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕು. ಅವನಿಗೆ ಬಹಳ ಹಿರಿದಾದ ಕೆಲಸವನ್ನು ಒಪ್ಪಿಸಲಾಗಿದೆ ಎಂದು ಅರಿಯಬೇಕು.**

**ಲೋಕವನ್ನು ಹಝ್ರತ್ ಪೈಗಂಬರ್(ಸ) ಎತ್ತಿ ಹಿಡಿದ ಅಲ್ಲಾಹನ ಏಕದೇವ ವಿಶ್ವಾಸದ ಬಾವುಟದ ಕೆಳಗೆ ತನ್ನಿರಿ. ಆಗಲೇ ನಾವು ನಮ್ಮ ಬೈಅತಿನ ಉದ್ದೇಶವನ್ನು ಸಾಧಿಸುವವರಾಗುವೆವು.**

**ಈ ವರ್ಷ ನಾನು ಲೋಕದಲ್ಲಿ ಒಂದು ವಿಪ್ಲವವನ್ನು ಒಂದು ಬದಲಾವಣೆಯನ್ನು ಉಂಟುಮಾಡಲು ನನ್ನ ಎಲ್ಲತರದ ಸಾಮರ್ಥ್ಯಗಳನ್ನು ಉಪಯೋಗಿಸುವೆನು ಎಂದು ಅಹ್ಮದಿಯಾದ ಪ್ರತಿಯೊಬ್ಬ ಸ್ತ್ರೀ–ಪುರುಷ, ಯುವಕ, ಸಣ್ಣವರು ದೊಡ್ಡವರು ಪ್ರತಿಜ್ಞೆಮಾಡಬೇಕು. ಅಲ್ಲಾಹನು ಹಾಗೆ ಮಾಡಲು ಪ್ರತಿಯೊಬ್ಬ ಅಹ್ಮದಿಗೆ ತೌಫೀಕ್ ನೀಡಲಿ.**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಶ ಕೋರಿಕೆ**

**ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ್‌ನೀ ವನ್ಸುರ್‌ನೀ ವರ್‌ಹಮ್‌ನೀ ಎಂಬ ದುಆವನ್ನು ಅಧಿಕವಾಗಿ ಮಾಡಿರಿ.ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧುಬಿಕ ಮಿನ್ ಶುರೂರಿಹಿಂ ಎಂಬ ದುಆ ಸಹ ಹೆಚ್ಚಾಗಿ ಮಾಡಿರಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–01–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿದೆ. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಶಹಾದತ್ತಿನ ಹಿನ್ನೆಲೆಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಮಸ್ಯೆಗಳು ಬಗೆಹರಿಸಲ್ಪಟ್ಟಿರದ ಸ್ಥಿತಿಯಲ್ಲೇ ಶ್ರೇಷ್ಠರಾದ ಜನರನ್ನೆಲ್ಲ ಕೊಲ್ಲುವ ಮೂಲಕ ಈ ಸಮಸ್ಯೆಯನ್ನು ದೂರಮಾಡಲು ಖವಾರಿಜಿಯರು ಸಮಾಲೋಚನೆ ನಡೆಸಿದರು. ಹೀಗೆ ಒಬ್ಬರು ಹಝ್ರತ್ ಅಲಿಯನ್ನು, ಒಬ್ಬರು ಹಝ್ರತ್ ಮುಆವಿಯರನ್ನು, ಮತ್ತೊಬ್ಬರು ಅಮ್ರ್ ಬಿನ್ ಆಸ್‌ರನ್ನು ಒಂದೇ ದಿನ ಒಂದೇ ಸಮಯದಲ್ಲಿ ಕೊಲ್ಲಲು ಖವಾರಿಜಿಯರಲ್ಲಿ ಕೆಲವು ಶೂರರಾದ ಜನರು ಪ್ರತಿಜ್ಞೆ ಮಾಡುತ್ತಾ ಹೊರಟರು. ಹಝ್ರತ್ ಮುಆವಿಯಾರ ಕಡೆಗೆ ಹೊರಟ ವ್ಯಕ್ತಿಯು ಹಝ್ರತ್ ಮುಆವಿಯರ ಮೇಲೆ ಹಲ್ಲೆ ನಡೆಸಿದನು. ಆದರೆ ಅವನ ಖಡ್ಗ ಸರಿಯಾಗಿ ತಗುಲಲಿಲ್ಲ. ಹಝ್ರತ್ ಮುಆವಿಯರಿಗೆ ಮಾಮೂಲಿಯಾದ ಗಾಯ ಮಾತ್ರವಾಯಿತು. ಅವನನ್ನು ಹಿಡಿದು ನಂತರ ಕೊಲ್ಲಲಾಯಿತು. ಹಝ್ರತ್ ಅಮ್ರ್ ಬಿನ್ ಆಸ್‌ರನ್ನು ಕೊಲ್ಲಲು ಹೋದವನು ಸಹ ವಿಫಲಗೊಂಡನು. ಏಕೆಂದರೆ ಅವರು ರೋಗಿಯಾಗಿದ್ದ ಕಾರಣದಿಂದ ಮಸೀದಿಗೆ ಬಂದಿರಲಿಲ್ಲ. ಹಝ್ರತ್ ಅಮ್ರ್ ಬಿನ್ ಆಸ್‌ರ ಬದಲಿಗೆ ನಮಾಝಿನ ಇಮಾಮತ್ ವಹಿಸಲು ಬಂದಿದ್ದ ವ್ಯಕ್ತಿಯನ್ನು ಇವನು ಕೊಂದನು. ಇವನನ್ನು ಹಿಡಿಯಲಾಯಿತು. ಅನಂತರ ಕೊಲ್ಲಲಾಯಿತು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಕೊಲ್ಲಲು ಹೊರಟವನು, ಹಝ್ರತ್ ಅಲಿ(ರ) ಬೆಳಿಗ್ಗಿನ ನಮಾಝಿಗೆ ನಿಲ್ಲಲು ಹೋಗುವಾಗ ಹಲ್ಲೆ ನಡೆಸಿದನು. ಹಝ್ರತ್ ಅಲಿ(ರ) ಅಪಾಯಕರವಾದ ರೀತಿಯಲ್ಲಿ ಗಾಯಗೊಂಡರು. ಅವರ ಮೇಲೆ ಹಲ್ಲೆ ನಡೆಸುವಾಗ ಆ ವ್ಯಕ್ತಿ ಹೀಗೆ ಹೇಳಿದ್ದನು: ಹೇ ಅಲಿ, ನಿನ್ನ ಪ್ರತಿಯೊಂದು ಮಾತುಗಳನ್ನು ಅನುಸರಿಸಬೇಕೆಂದು ಹೇಳಲು ನಿನಗೆ ಹಕ್ಕಿಲ್ಲ. ಬದಲಿಗೆ ಈ ಹಕ್ಕು ಕೇವಲ ಅಲ್ಲಾಹನಗಾಗಿದೆ. (ಅನ್ವಾರೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ–3, ಪುಟ–202)

ಹಝ್ರತ್ ಅಲಿಯರ(ರ) ಶಹಾದತಿನ ಬಗ್ಗೆ ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು. ಹಝ್ರತ್ ಉಬೈದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯೊಡನೆ(ರ)

ಹೇಳಿದರು: ಹೇ ಅಲಿ, ಮೊದಲಿನವರಲ್ಲಿ ಮತ್ತು ಕೊನೆಯವರಲ್ಲಿ ಅತ್ಯಂತ ನತದೃಷ್ಟರಾದ ವ್ಯಕ್ತಿ ಯಾರೆಂದು ಗೊತ್ತೇ? ಅವರು ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿ ಎಲ್ಲರಿಗಿಂತ ಹೆಚ್ಚು ತಿಳಿದಿದ್ದಾರೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಿಂದಿನವರಲ್ಲಿ ಅತ್ಯಂತ ನತದೃಷ್ಟನಾದ ವ್ಯಕ್ತಿ ಹಝ್ರತ್ ಸಾಲಿಹ್‌ರ ಒಂಟೆಯ ಸ್ನಾಯುರಜ್ಜುಗಳನ್ನು ಮುರಿದವನಾಗಿದ್ದನು. ಹೇ ಅಲಿ, ಕೊನೆಯವರಲ್ಲಿ ಅತ್ಯಂತ ನತದೃಷ್ಟನಾದ ವ್ಯಕ್ತಿ ನನ್ನ ಮೇಲೆ ಈಟಿಯಿಂದ ಹಲ್ಲೆ ನಡೆಸುವವನು ಆಗಿರುವನು. ಈಟಿಯಿಂದ ಗಾಯಗೊಳಿಸಲ್ಪಡುವ ಜಾಗದ ಕಡೆಗೆ ಹಝ್ರತ್ ಪೈಗಂಬರ್(ಸ) ಬೊಟ್ಟುಮಾಡಿ ತೋರಿಸಿದರು.

ಹಝ್ರತ್ ಅಲಿಯ ದಾಸಿಯಾದ ಉಮ್ಮೇ ಜಾಫರ್ ವರದಿ ಮಾಡುತ್ತಾರೆ: ನಾನು ಹಝ್ರತ್ ಅಲಿಯ(ರ) ಕೈಗಳಿಗೆ ನೀರನ್ನು ಸುರಿಸುತ್ತಿದ್ದೆ. ಅವರು ತನ್ನ ತಲೆಯನ್ನು ಎತ್ತಿದರು. ತನ್ನ ಗಡ್ಡವನ್ನು ಹಿಡಿದುಕೊಂಡು ಅದನ್ನು ಮೂಗಿನ ತನಕ ಎತ್ತಿದರು. ಅನಂತರ ಗಡ್ಡವನ್ನು ಸಂಬೋಧಿಸಿ ಹೇಳಿದರು: ವಾಹ್ ವಾಹ್, ನಿನ್ನ ಬಗ್ಗೆ ಏನು ಹೇಳಲಿ. ನೀನು ಖಂಡಿತ ರಕ್ತದಿಂದ ಒದ್ದೆಯಾಗುವೆ. ಅನಂತರ ಜುಮಾ ದಿವಸ ಅವರು ಶಹೀದ್ ಆದರು.

ಒಂದು ಕಡೆ ಹಝ್ರತ್ ಅಲಿಯ ಶಹಾದತಿನ ಘಟನೆ ಹೀಗೆ ವರದಿಯಾಗಿದೆ: ಇಬ್ನು ಹನ್‌ಫಿಯಾ ವರದಿ ಮಾಡುತ್ತಾರೆ: ನಾನು ಹಾಗೂ ಹಝ್ರತ್ ಹಸನ್ ಮತ್ತು ಹಝ್ರತ್ ಹುಸೈನ್ ಹಮಾಮಿನಲ್ಲಿ ಕುಳಿತುಕೊಂಡಿದ್ದೆವು. ನಮ್ಮ ಬಳಿ ಇಬ್ನು ಮುಲ್ಜಮ್ ಬಂದನು. ಅವನು ಪ್ರವೇಶಿಸಿದಾಗ ಹಸನ್ ಹುಸೈನ್ ಅತೃಪ್ತಿಯನ್ನು ಸೂಚಿಸಿ ಹೀಗೆ ಹೇಳಿದರು: ಇಲ್ಲಿ ನಮ್ಮ ಬಳಿಗೆ ಬರಲು ನಿನಗೆ ಹೇಗೆ ಧೈರ್ಯ ಬಂತು? ವರದಿಗಾರ ಹೇಳುತ್ತಾರೆ: ನಾನು ಅವರಿಬ್ಬರೊಡನೆ ಹೇಳಿದೆ: ನೀವು ಅವನೊಡನೆ ಮಾತನಾಡಬೇಡ. ಅಲ್ಲಾಹನಾಣೆ, ಇವನು ನಿಮ್ಮ ವಿರುದ್ಧ ಏನನ್ನು ಮಾಡಲು ಉದ್ದೇಶಿಸಿರುವನೋ ಅದು ಇದಕ್ಕಿಂತ ಭಯಾನಕವಾದುದಾಗಿದೆ. ಹಝ್ರತ್ ಅಲಿಯ ಮೇಲೆ ಹಲ್ಲೆ ನಡೆಸಿದ ನಂತರ ಅವನನ್ನು ಸೆರೆಹಿಡಿದು ತರಲಾಯಿತು. ಆಗ ಇಬ್ನು ಹನ್‌ಫಿಯ ಹೇಳಿದರು: ನಾವು ಹಮಾಮಿನಲ್ಲಿ ಇದ್ದಾಗಲೇ ನಾನು ಇವನನ್ನು ಸರಿಯಾಗಿ ಅರಿತಿದ್ದೆ. ಆಗ ಹಝ್ರತ್ ಅಲಿ(ರ) ಹೇಳಿದರು: ಇವನು ಕೈದಿಯಾಗಿದ್ದಾನೆ. ಆದ್ದರಿಂದ ಉತ್ತಮ ರೀತಿಯಲ್ಲಿ ಇವನ ಅತಿಥಿ ಸತ್ಕಾರ ಮಾಡು ಮತ್ತು ಅವನನ್ನು ಆದರದಿಂದ ತಂಗಿಸು. ನಾನು ಜೀವಂತವಾಗಿ ಉಳಿದರೆ, ಅವನನ್ನು ಕೊಲ್ಲುವನು ಅಥವಾ ಅವನನ್ನು ಕ್ಷಮಿಸುವೆನು. ಆದರೆ ನಾನು ಮೃತಪಟ್ಟರೆ ಅವನನ್ನು ನನ್ನ ಕೊಲೆಗೆ ಪ್ರತಿಕಾರವಾಗಿ ಕೊಲ್ಲಿರಿ. ಆದರೆ ಹದ್ದುಮೀರಿ ವರ್ತಿಸಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ಹದ್ದುಮೀರುವವರನ್ನು ಇಷ್ಟಪಡುವುದಿಲ್ಲ.

ಹಝ್ರತ್ ಇಬ್ನು ಅಬ್ಬಾಸ್ ಸ್ವತಂತ್ರಗೊಳಿಸಿದ್ದ ಗುಲಾಮನಾದ ಖುಸುಮ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ನನ್ನ ಹಿರಿಯ ಮಗನಗೆ ತನ್ನ ವಸಿಯ್ಯತಿನಲ್ಲಿ ಹೀಗೆ ಬರೆದರು: ಅವನ ಎಂದರೆ, ಇಬ್ನು ಮುಲ್‌ಜಮಿನ ಹೊಟ್ಟೆ ಮತ್ತು ಗುಪ್ತಾಂಗಕ್ಕೆ ಈಟಿಯಿಂದ ತಿವಿಯಬಾರದು. ಹೀಗೆ ವರದಿಯಾಗಿದೆ: ಜನರಲ್ಲಿ ಮೂರು ಜನರನ್ನು ನೇಮಕ ಮಾಡಲಾಗಿತ್ತು. ಹಮೀರ್ ಗೋತ್ರದವನಾಗಿದ್ದ ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್ ಮುರಾದಿ, ಅವನನ್ನು ಖಂದಾದ ಕುಟುಂಬವಾದ ಬನೂ ಜಬ್ಲದ ಹಲೀಫಾದ ಮುರಾದ್ ಗೋತ್ರದವನೆಂದು ಗಣಿಸಲಾಗುತ್ತಿತ್ತು. ಬರಕ್ ಬಿನ್ ಅಬ್ದುಲ್ಲಾಹ್ ತಮೀಮಿ ಮತ್ತು ಅಮ್ರ್ ಬಿನ್ ಬಕೀರ್ ತಮೀಮಿ. ಈ ಮೂವರು ಮಕ್ಕದಲ್ಲಿ ಒಟ್ಟುಗೂಡಿದರು. ಮೂವರು ವ್ಯಕ್ತಿಗಳಾದ ಹಝ್ರತ್ ಅಲಿ ಬಿನ್ ಅಬೂತಾಲಿಬ್, ಹಝ್ರತ್ ಮುಆವಿಯಾ ಬಿನ್ ಅಬೂಸುಫ್‌ಯಾನ್ ಮತ್ತು ಹಝ್ರತ್ ಅಮ್ರ್ ಬಿನ್ ಆಸ್‌ರನ್ನು ಖಂಡಿತ ಕೊಲ್ಲುವೆವು ಮತ್ತು ಜನರಿಗೆ ಅವರಿಂದ ಮುಕ್ತಿ ಕೊಡುವೆವು ಎಂದು ಈ ಮೂವರು ದೃಢವಾದ ಪ್ರತಿಜ್ಞೆ ಮಾಡಿದ್ದರು. ಆರಂಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಪ್ರಸ್ತಾಪಿಸಿದ್ದ ಮೂವರು ಕೊಲೆಗಾರರ ಹೆಸರಾಗಿತ್ತು ಇದು. ಅಲಿ ಬಿನ್ ಅಬೂತಾಲಿಬ್‌ರನ್ನು ಕೊಲ್ಲುವ ಜವಾಬ್ದಾರಿಯನ್ನು ನಾನು ವಹಿಸುತ್ತೇನೆ ಎಂದು ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್ ಹೇಳಿದನು. ಮುಆವಿಯರನ್ನು ಕೊಲ್ಲುವ ಜವಾಬ್ದಾರಿಯನ್ನು ನಾನು ವಹಿಸುತ್ತೇನೆಂದು ಬರಕ್ ಹೇಳಿದನು. ಅಮ್ರ್ ಬಿನ್ ಆಸ್‌ರಿಂದ ನಿಮಗೆ ಮುಕ್ತಿ ನೀಡುವೆನು ಎಂದು ಅಮ್ರ್ ಬಿನ್ ಬಕೀರ್ ಹೇಳಿದನು. ಅನಂತರ ಅವರು ಈ ವಿಷಯದಲ್ಲಿ ಅನ್ಯೋನ್ಯ ಸುದೃಢವಾದ ಪ್ರತಿಜ್ಞೆ ಮಾಡಿದರು. ಅವರು ಹೇಳಿದ್ದ ವ್ಯಕ್ತಿಗಳನ್ನು ಕೊಲ್ಲುವ ಪ್ರತಿಜ್ಞೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಪರಸ್ಪರ ಭರವಸೆ ಕೊಟ್ಟರು. ಆ ಮೂವರನ್ನು ಕೊಲ್ಲುವೆವು ಅಥವಾ ತಮ್ಮ ಜೀವವನ್ನು ತ್ಯಾಗಮಾಡುವೆವು. ಎರಡರಲ್ಲಿ ಒಂದು ಆಗದೆ ಮರಳಿಬರಲಾರೆವು ಎಂದು ಪ್ರತಿಜ್ಞೆ ಮಾಡಿದರು. ಅವರು ಈ ಉದ್ದೇಶಕ್ಕಾಗಿ ರಮಝಾನಿನ 17ನೇ ರಾತ್ರಿಯನ್ನು ನಿಶ್ಚಯಿಸಿದರು. ಅನಂತರ ಅವರಲ್ಲಿ ಪ್ರತಿಯೊಬ್ಬರು ಅವರು ಕೊಲ್ಲಲು ಉದ್ದೇಶಿಸಿದ್ದ ವ್ಯಕ್ತಿಯ ಪಟ್ಟಣದ ಕಡೆಗೆ ರವಾನೆಯಾದರು. ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್ ಕೂಫಕ್ಕೆ ಹೋದನು. ತನ್ನ ಖವಾರಿಜ್ ಸ್ನೇಹಿತರನ್ನು ಭೇಟಿಯಾದರು. ಆದರೆ ತನ್ನ ಉದ್ದೇಶವನ್ನು ಅವರೊಡನೆ ಹೇಳಲಿಲ್ಲ. ಪರಸ್ಪರ ಭೇಟಿಯಾಗುತ್ತಿದ್ದರು. ಅವನು ಒಂದು ದಿನ ತೈಮುರ್‌ರುಬಾಬ್ ಗೋತ್ರದ ಒಂದು ಸಂಘವನ್ನು ಕಂಡನು. ಅದರಲ್ಲಿ ಖತ್ತಾಮ್ ಬಿನ್ತ್ ಶಜ್‌ನ ಬಿನ್ ಅದ್ದಿ ಎಂಬ ಒಬ್ಬ ಹೆಂಗಸು ಇದ್ದಳು. ನೆಹರ್‌ವಾನ್ ಯುದ್ಧದಲ್ಲಿ ಹಝ್ರತ್ ಅಲಿ ಅವಳ ತಂದೆ ಮತ್ತು ಸಹೋದರನನ್ನು ಕೊಂದಿದ್ದರು. ಆ ಹೆಂಗಸು ಇಬ್ನು ಮುಲ್ಜಮಿಗೆ ಇಷ್ಟವಾಯಿತು. ಹೀಗೆ ಅವನು ಅವಳೊಡನೆ ನಿಕಾಹ್ ಮಾಡಲು ಸಂದೇಶ ಕಳುಹಿಸಿದನು. 'ನನ್ನೊಂದಿಗೆ ಒಂದು ವಾಗ್ದಾನ ಮಾಡುವ ವರೆಗೆ ನಾನು ನಿನ್ನೊಡನೆ ನಿಕಾಹ್ ಮಾಡುವುದಿಲ್ಲ' ಎಂದು ಅವಳು ಹೇಳಿದಳು. 'ನೀನು ಬೇಡುವುದನ್ನು ನಾನು ಕೊಡುವೆನು' ಎಂದು ಅವನು ಹೇಳಿದನು. ಮೂರು ಸಾವಿರ ದಿರ್ಹಮ್ ಮತ್ತು ಅಲಿ ಬಿನ್ ಅಬೀ ತಾಲಿಬ್‌ರ ಕೊಲೆ ಎಂದು ಅವಳು ಹೇಳಿದಳು. ಅಲ್ಲಾಹನಾಣೆ, ನಾನು ಈ ಪಟ್ಟಣಕ್ಕೆ ಅಲಿ ಬಿನ್ ಅಬೂ ತಾಲಿಬನ್ನು ಕೊಲ್ಲಲಿಕ್ಕಾಗಿಯೇ ಬಂದಿರುವೆನು ಹಾಗೂ ನೀನು ಬೇಡಿದ್ದನ್ನು ನಾನು ನಿನಗೆ ಖಂಡಿತ ಕೊಡುವೆನು ಎಂದು ಅವನು ಹೇಳಿದನು. ಅನಂತರ ಇಬ್ನು ಮುಲ್ಜಮ್ ಶಬೀಬ್ ಬಿನ್ ಬಜ್‌ರ ಅಶ್‌ಜಈನನ್ನು ಭೇಟಿಯಾದನು. ತನ್ನ ಉದ್ದೇಶವನ್ನು ಅವನೊಡನೆ ಹೇಳಿದನು ಮತ್ತು ಅವನೊಡನೆ ತನ್ನೊಂದಿಗೆ ಇರಲು ಹೇಳಿದನು. ಶಬೀಬ್ ಅವನ ಮಾತನ್ನು ಅಂಗೀಕರಿಸಿದನು. ಹಝ್ರತ್ ಅಲಿಯನ್ನು(ರ) ಶಹೀದ್ ಮಾಡಲು ಉದ್ದೇಶಿಸಿದ್ದ ದಿನದ ಹಿಂದಿನ ರಾತ್ರಿಯಂದು ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್ ಅಂದು ಅಶ್‌ಅಶ್ ಬಿನ್ ಖೈಸ್‌ಖಂದಿಯ ಮಸೀದಿಯಲ್ಲಿ ತನ್ನ ಸಂಗಡಿಗನಾದ ಶಬೀಬ್‌ನೊಡನೆ ರಹಸ್ಯಮಾತುಗಳನ್ನು ನಡೆಸುತ್ತಾ ಕಳೆದನು. ಮುಂಜಾನೆಯ ಸಮಯದಲ್ಲಿ, ಎದ್ದೇಳಿರಿ ಬೆಳಿಗ್ಗೆಯಾಯಿತು ಎಂದು ಹೇಳಿ ಅಶ್‌ಅಶ್ ಅವನನ್ನು ಎಬ್ಬಿಸಿದನು. ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್ ಮತ್ತು ಶಬೀಬ್ ಬಿನ್ ಬಜ್ರ ಎದ್ದುನಿಂತರು. ತಮ್ಮ ಖಡ್ಗಗಳನ್ನು ಹಿಡಿದುಕೊಂಡು ಹಝ್ರತ್ ಅಲಿ(ರ) ಬರುವ ಪ್ರವೇಶದ್ವಾರಕ್ಕೆ ಎದುರಾಗಿ ಬಂದು ಕುಳಿತುಕೊಂಡರು. ಹಝ್ರತ್ ಹಸನ್ ಬಿನ್ ಅಲಿ ವರದಿ ಮಾಡುತ್ತಾರೆ: ನಾನು ಮುಂಜಾನೆ ಹಝ್ರತ್ ಅಲಿಯ ಸಮೀಪ ಬಂದು ಕುಳಿತುಕೊಂಡೆ. ಆಗ ಹಝ್ರತ್ ಅಲಿ(ರ) ಹೇಳಿದರು: ನಾನು ರಾತ್ರಿ ಸಮಯದಲ್ಲಿ ಮನೆಯವರನ್ನು ಎಬ್ಬಿಸುತ್ತಿದ್ದೆ. ಅನಂತರ ಕುಳಿತಿರುವಾಗಲೇ ನನಗೆ ನಿದ್ದೆಬಂತು. ನಾನು ಕನಸಿನಲ್ಲಿ ಹಝ್ರತ್ ಪೈಗಂಬರರನ್ನು(ಸ) ಕಂಡೆನು. ನಾನು ಹೇಳಿದೆ: ಯಾ ರಸೂಲಲ್ಲಾಹ್, ನಾನು ನಿಮ್ಮ ಸಮುದಾಯದ ಕಡೆಯಿಂದ ಒರಟುತನ ಮತ್ತು ತೀವ್ರವಾದ ಜಗಳವನ್ನು ಎದುರಿಸುತ್ತಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ವಿರುದ್ಧ ಅಲ್ಲಾಹನಲ್ಲಿ ದುಆ ಮಾಡು. ನಾನು ಹೇಳಿದೆ: ಹೇ ಅಲ್ಲಾಹ್, ನನಗೆ ಅವರ ಬದಲಿಗೆ ಅವರಿಗಿಂತ ಉತ್ತಮವಾದವರನ್ನು ನೀಡು ಮತ್ತು ಅವರಿಗೆ ನನ್ನ ಬದಲಿಗೆ ನಿಕೃಷ್ಟನಾದವನನ್ನು ನೀಡು. ಅಷ್ಟರಲ್ಲಿ ಮುಅಧ್ಧಿನ್‌ರಾದ ಇಬ್ನು ನಬಾಹ್ ಬಂದು ನಮಾಝಿಗೆ ಸಮಯವಾಯಿತೆಂದು ಹೇಳಿದರು. ಹಝ್ರತ್ ಹಸನ್ ಹೇಳುತ್ತಾರೆ: ನಾನು ಹಝ್ರತ್ ಅಲಿಯ ಕೈಯನ್ನು ಹಿಡಿದಾಗ, ಅವರು ಎದ್ದುನಿಂತು ನಡೆದರು. ಇಬ್ನು ನಬಾಹ್ ಅವರ ಮುಂದಿದ್ದರು ಮತ್ತು ಹಝ್ರತ್ ಅಲಿ ಅವರ ಹಿಂದೆ. ಹಝ್ರತ್ ಅಲಿ(ರ) ಬಾಗಿಲ ಹೊರಗೆ ಬಂದಾಗ ಅವರು, ಹೇ ಜನರೇ ನಮಾಝ್ ನಮಾಝ್ ಎಂದು ಉಚ್ಚ ಸ್ವರದಲ್ಲಿ ಹೇಳಿದರು. ಅವರು ಪ್ರತಿದಿನ ಹೀಗೆಯೇ ಮಾಡುತ್ತಿದ್ದರು. ಅವರು ಹೊರಡುವಾಗ ಅವರ ಕೈಯಲ್ಲಿ ಒಂದು ಲಾಠಿ ಇರುತ್ತಿತ್ತು. ಅವರು ಬಾಗಿಲುಗಳಿಗೆ ಹೊಡೆಯುತ್ತಾ ಜನರನ್ನು ಎಬ್ಬಿಸುತ್ತಿದ್ದರು. ಅದೇ ಸಮಯದಲ್ಲಿ ಆ ಇಬ್ಬರು ಕೊಲೆಗಾರರು ಅವರ ಮೇಲೆ ಹಲ್ಲೆ ನಡೆಸಲು ಮುಂದೆ ಬಂದರು. ದೃಕ್‌ಸಾಕ್ಷಿಯರಾದ ಕೆಲವರು ಹೇಳುತ್ತಾರೆ: ನಾವು ಖಡ್ಗದ ಹೊಳಪನ್ನು ಕಂಡೆವು ಮತ್ತು ಒಬ್ಬ ವ್ಯಕ್ತಿ ಹೀಗೆ ಹೇಳುತ್ತಿರುವುದಾಗಿ ಕೇಳಿದೆವು: ಹೇ ಅಲಿ, ಆಜ್ಞೆಯ ಅಧಿಕಾರ ಅಲ್ಲಾಹನಗಾಗಿದೆ. ನಿನಗೆ ಅಲ್ಲ. ಅನಂತರ ನಾವು ಮತ್ತೊಂದು ಖಡ್ಗವನ್ನು ನೋಡಿದೆವು. ಅನಂತರ ಇಬ್ಬರೂ ಸೇರಿಕೊಂಡು ಹಝ್ರತ್ ಅಲಿಯ ಮೇಲೆ ಹಲ್ಲೆ ನಡೆಸಿದರು. ಅಬ್ದುರ್ರಹ್ಮಾನ್ ಬಿನ್ ಮುಲ್ಜಮಿನ ಖಡ್ಗವು ಹಝ್ರತ್ ಅಲಿಯ ಹಣೆಯಿಂದ ತಲೆಯ ಮಧ್ಯಭಾಗದ ತನಕ ತಗುಲಿತು ಮತ್ತು ಮಿದುಳು ತನಕ ತಲುಪಿತು. ಆದರೆ ಶಬೀಬಿನ ಖಡ್ಗವು ಬಾಗಿಲಿಗೆ ತಗುಲಿತು. ಹಝ್ರತ್ ಅಲಿ(ರ) ಹೀಗೆ ಹೇಳಿದರು: ಈ ಇಬ್ಬರು ವ್ಯಕ್ತಿಗಳು ಪರಾರಿಯಾಗಲು ಬಿಡಬೇಡಿರಿ. ಎಲ್ಲ ಕಡೆಯಿಂದ ಜನರು ಬಂದರು ಆದರೆ ಶಬೀಬ್ ಪರಾರಿಯಾದನು. ಅಬ್ದುರ್ರಹ್ಮಾನ್ ಬಿನ್ ಮುಲ್ಜಮ್‌ನನ್ನು ಸೆರೆಹಿಡಿಯಲಾಯಿತು ಮತ್ತು ಅವನನ್ನು ಹಝ್ರತ್ ಅಲಿಯ ಬಳಿಗೆ ತಲುಪಿಸಲಾಯಿತು. ಹಝ್ರತ್ ಅಲಿ(ರ) ಹೇಳಿದರು: ಅವನಿಗೆ ಉತ್ತಮ ಆಹಾರವನ್ನು ತಿನ್ನಿಸಿರಿ, ಮೃದುವಾದ ಹಾಸಿಗೆಯನ್ನು ನೀಡಿರಿ. ನಾನು ಜೀವಂತವಾಗಿ ಇರುವುದಾದರೆ, ನಾನು ಅವನನ್ನು ಕ್ಷಮಿಸಲು ಅಥವಾ ಅವನಿಂದ

ಪ್ರತಿಕಾರ ಪಡೆಯಲು ಹೆಚ್ಚು ಹಕ್ಕುದಾರನಾಗಿದ್ದೇನೆ. ಆದರೆ ನಾನು ಮೃತಪಟ್ಟರೆ ಅವನನ್ನು ಸಹ ಕೊಂದು ನನ್ನೊಡನೆ ಸೇರಿಸು. (ಅತ್ತಬಖತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-25-27, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ನಾನು ಸರ್ವಲೋಕಗಳ ಪ್ರಭುವಿನ ಬಳಿ ಇವನ ವಿಷಯವನ್ನು ಸಮರ್ಪಿಸುವೆನು. ಹಝ್ರತ್ ಅಲಿಯರ(ರ) ಮರಣ ಸಮೀಪವಾದಾಗ, ಅವರು ಹೀಗೆ ವಸಿಯ್ಯತ್ ಮಾಡಿದರು:

**ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ.** ಇದು ಅಲಿ ಬಿನ್ ಅಬೂತಾಲಿಬ್ ಮಾಡುವ ವಸಿಯ್ಯತ್ ಆಗಿದೆ. ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲ. ಅವನು ಏಕನೂ ಅವನಿಗೆ ಸಹಭಾಗಿಯಾಗಿ ಯಾರೂ ಇಲ್ಲ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವನ ದಾಸನೂ ಸಂದೇಶವಾಹಕನೂ ಆಗಿದ್ದಾರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಪೈಗಂಬರರನ್ನು ಅಲ್ಲಾಹನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದ್ದನು. ಅದು ಬಹುದೇವಾರಾಧಕರಿಗೆ ಇಷ್ಟವಿರದಿದ್ದರೂ ಸರಿ. ನಿಶ್ಚಯವಾಗಿಯೂ ನನ್ನ ನಮಾಝ್, ನನ್ನ ತ್ಯಾಗ, ನನ್ನ ಜೀವಿತ ಮತ್ತು ನನ್ನ ಮರಣ ಎಲ್ಲವೂ ಸರ್ವಲೋಕಗಳ ಪ್ರಭುವಾದ ಅಲ್ಲಾಹನಿಗಾಗಿದೆ. ಅವನಿಗೆ ಸಹಭಾಗಿಯಾಗಿ ಯಾರೂ ಇಲ್ಲ ಮತ್ತು ನನಗೆ ಅದರ ಆದೇಶವನ್ನು ನೀಡಲಾಗಿದೆ. ನಾನು ವಿಧೇಯರಾದ ಜನರಲ್ಲಿ ಸೇರಿರುವವನು. ಹೇ ಹಸನ್, ನಾನು ನಿನ್ನೊಡನೆ ಮತ್ತು ನನ್ನ ಎಲ್ಲ ಮಕ್ಕಳೊಡನೆ ಹಾಗೂ ನನ್ನ ಮನೆಯವರೊಡನೆ ನಿಮ್ಮ ಪರಿಪಾಲಕನಾದ ಅಲ್ಲಾಹನ ಮೇಲೆ ಭಯಭಕ್ತಿ ಇರಿಸಲು ಮತ್ತು ನೀವು ಇಸ್ಲಾಮಿನಲ್ಲಿ ಇದ್ದುಕೊಂಡೇ ಈ ಲೋಕವನ್ನು ಬಿಟ್ಟುಹೋಗಲು ಉಪದೇಶಿಸುತ್ತೇನೆ. ನೀವೆಲ್ಲರೂ ಸೇರಿಕೊಂಡು ಅಲ್ಲಾಹನ ಪಾಶವನ್ನು ಹಗ್ಗವನ್ನು ಗಟ್ಟಿಯಾಗಿ ಹಿಡಿಯಿರಿ. ಪರಸ್ಪರ ಭಿನ್ನತೆ ಉಂಟುಮಾಡಬೇಡಿರಿ. ಏಕೆಂದರೆ ನಾನು ಹಝ್ರತ್ ಪೈಗಂಬರರಿಂದ(ಸ) ಹೀಗೆ ಆಲಿಸಿದ್ದೇನೆ: ಅನ್ಯೋನ್ಯ ಸಂಬಂಧಗಳನ್ನು ಸುಧಾರಿಸುವುದು ಐಚ್ಛಿಕ ನಮಾಝ್‌ಗಳು ಮತ್ತು ಉಪವಾಸಕ್ಕಿಂತ ಉತ್ತಮವಾದುದಾಗಿದೆ. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಇದನ್ನು ನೆನಪಿನಲ್ಲಿಡಬೇಕು. **ಪರಸ್ಪರ ಸಂಬಂಧಗಳನ್ನು ಉತ್ತಮಗೊಳಿಸುವುದು ಐಚ್ಛಿಕ ನಮಾಝ್‌ಗಳು ಮತ್ತು ಉಪವಾಸಕ್ಕಿಂತ ಶ್ರೇಷ್ಠವಾದುದಾಗಿದೆ.** ನೀವು ನಿಮ್ಮ ಸಂಬಂಧಿಕರ ಬಗ್ಗೆ ಕಾಳಜಿಹೊಂದಿರಿ. ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿರಿ. ಇದರಿಂದ ಅಲ್ಲಾಹನು ನಿಮ್ಮ ಪರಲೋಕದ ಲೆಕ್ಕಚಾರವನ್ನು ಸುಲಭಗೊಳಿಸುವನು. ಅನಾಥರ ವಿಷಯದಲ್ಲಿ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅವರು ತಮ್ಮ ನಾಲಗೆಯಿಂದ ನಿಮ್ಮೊಡನೆ ಬೇಡುವ ಸ್ಥಿತಿ ಉಂಟುಮಾಡದಿರು. ಅವರು ನಿಮ್ಮ ಮುಂದೆ ವ್ಯರ್ಥವಾಗದಿರಲಿ. ನೆರೆಕರೆಯವರಿಗೆ ಸಂಬಂಧಿಸಿ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಏಕೆಂದರೆ, ನೆರೆಕರೆಯವರ ಹಕ್ಕಿನ ಬಗ್ಗೆ ಹಝ್ರತ್ ಪೈಗಂಬರ್(ಸ) ಉಪದೇಶಿಸುತ್ತಿದ್ದರು. ಎಲ್ಲಿಯ ವರೆಗೆ ಎಂದರೆ, ನೆರೆಕರೆಯವರನ್ನು ವಾರಸುದಾರರಲ್ಲಿ ಹಝ್ರತ್ ಪೈಗಂಬರ್(ಸ) ಒಳಪಡಿಸುವರೇ ಎಂಬ ಸಂಶಯ ನಮಗೆ ಉಂಟಾಗುತ್ತಿತ್ತು. ಪವಿತ್ರ ಖುರ್‌ಆನಿನ ವಿಷಯದಲ್ಲಿ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಇಲ್ಲದಿದ್ದರೆ ಬೇರೆಯವರು ನಿಮಗಿಂತ ಮುಂದೆ ಬರುವರು. ನಮಾಝಿನ ವಿಷಯದಲ್ಲಿ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಇದು ಧರ್ಮದ ಆಧಾರಸ್ತಂಭವಾಗಿದೆ. ನಿಮ್ಮ ಪ್ರಭುವಿನ ಗೃಹ, ಎಂದರೆ ಮಸೀದಿಯ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಜೀವಿತದಲ್ಲಿ ಎಂದಿಗೂ ಅದನ್ನು ಖಾಲಿಯಾಗಿ ಇಡಬೇಡಿರಿ. ಏಕೆಂದರೆ ಅದನ್ನು ಖಾಲಿಯಾಗಿ ಬಿಟ್ಟರೆ, ಅದರಂತಹ ಯಾವುದೇ ಮನೆ ನಿಮಗೆ ಲಭಿಸದು. ನಿಮ್ಮ ಜೀವಗಳು ಮತ್ತು ಸಂಪತ್ತುಗಳೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ಝಕಾತ್ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಏಕೆಂದರೆ ಅದು ಪ್ರಭುವಿನ ಕೋಪವನ್ನು ನಂದಿಸುತ್ತದೆ. ಹಝ್ರತ್ ಪೈಗಂಬರರ(ಸ) ಕುರಿತು ನಿಮ್ಮ ಜವಾಬ್ದಾರಿ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಪರಸ್ಪರ ದೌರ್ಜನ್ಯ ಮಾಡಬೇಡಿರಿ. ಹಝ್ರತ್ ಪೈಗಂಬರರ(ಸ) ಸಹಾಬರ ಕುರಿತು ಅಲ್ಲಾಹನ ಭಯವಿರಿಸಿಕೊಳ್ಳಿರಿ. ಏಕೆಂದರೆ ಹಝ್ರತ್ ಪೈಗಂಬರ್(ಸ) ಅವರ ಪರವಾಗಿ ವಸಿಯ್ಯತ್ ಮಾಡಿದ್ದಾರೆ. ದರಿದ್ರರ ಮತ್ತು ಬಡವರ ಬಗ್ಗೆ ಸಹ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅವರನ್ನು ನಿಮ್ಮ ಸಂಪತ್ತುಗಳಲ್ಲಿ ಭಾಗಿಯನ್ನಾಗಿ ಮಾಡಿರಿ. ನಿಮಗೆ ಒಪ್ಪಿಸಲಾದ ಸೇವಕರ ಬಗ್ಗೆ, ಅವರ ಸಂಬಂಧಿಸಿದ ಸಂಗತಿಗಳ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ನಮಾಝನ್ನು ಸಂರಕ್ಷಿಸಿರಿ. ನಮಾಝನ್ನು ಅನುಷ್ಠಿಸುವುದನ್ನು ಬಿಡಬೇಡಿರಿ. ಅಲ್ಲಾಹನ ಸಂಪ್ರೀತಿ ಗಳಿಸುವಂತಾಗಲು ಯಾವನೇ ನಿಂದಕನಿಗೆ ಹೆದರಬೇಡಿರಿ. ಅಲ್ಲಾಹನ ಸಂಪ್ರೀತಿ ಮುಂದಿರಬೇಕು. ಇದು ಬಹಳ ಮುಖ್ಯವಾದ ವಿಷಯವಾಗಿದೆ. ನಿನಗೆ ನಷ್ಟವನ್ನು ಉಂಟುಮಾಡಲು ಇಚ್ಛಿಸುವವನ ಮತ್ತು ವಿದ್ರೋಹ ಮಾಡಲು ಬಯಸುವವನ ವಿರುದ್ಧ ಅಲ್ಲಾಹನೇ ಸಾಕು. ಅಲ್ಲಾಹನು ನಿಮ್ಮನ್ನು ಆಜ್ಞಾಪಿಸಿದಂತೆ ಜನರೊಡನೆ ಒಳ್ಳೆಯ ಮಾತುಗಳನ್ನು ಹೇಳಿರಿ. ಒಳ್ಳೆಯ ಮಾತುಗಳನ್ನು ಉಪದೇಶಿಸುವುದನ್ನು ಮತ್ತು ಕೆಟ್ಟ ಕೆಲಸಗಳಿಂದ ಜನರನ್ನು ತಡೆಯುವುದನ್ನು ಎಂದಿಗೂ ಬಿಟ್ಟುಬಿಡಬೇಡಿರಿ. ಇಲ್ಲದಿದ್ದರೆ, ನಿಮ್ಮಲ್ಲಿ ನಿಕೃಷ್ಟರು ನಿಮ್ಮ ಅಧಿಕಾರಿಗಳಾಗುವರು. ಇದು ಪ್ರಧಾನವಾದ ಸಂಗತಿಯಾಗಿದೆ. ಅನಂತರ ನೀವು ದುಆ ಮಾಡಿದರೆ, ನಿಮ್ಮ ಪ್ರಾರ್ಥನೆಗಳು ಸ್ವೀಕರಿಸಲ್ಪಡದು. ಇದು ಈಗಿನ ಮುಸ್ಲಿಂ ರಾಷ್ಟ್ರಗಳ ಸ್ಥಿತಿಯಾಗಿದೆ. ಅನ್ಯೋನ್ಯ ಸಂಪರ್ಕ ಮತ್ತು ಸಂಬಂಧವನ್ನು ಇರಿಸಿಕೊಳ್ಳಿರಿ ಹಾಗೂ ಬಾಹ್ಯೋಪಚಾರವಿಲ್ಲದೆ ಪರಸ್ಪರ ಸಹಕರಿಸಿರಿ. ಕೇಳಿರಿ, ಅನ್ಯೋನ್ಯ ಶತ್ರುತ್ವವನ್ನು ವರ್ಧಿಸಬೇಡಿರಿ; ಸಂಬಂಧ ವಿಚ್ಛೇಧಿಸಬೇಡಿರಿ; ಒಡಕು ಉಂಟುಮಾಡಬೇಡಿರಿ; ಸತ್ಕರ್ಮ ಮತ್ತು ದೇವಭಕ್ತಿಯಲ್ಲಿ ಪರಸ್ಪರ ನೆರವಾಗಿರಿ; ಪಾಪ ಮತ್ತು ದುಷ್ಕೃತ್ಯದಲ್ಲಿ ನೆರವಾಗಬೇಡಿರಿ; ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನಿಶ್ಚಯವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ. ಹೇ ಅಹ್ಲೇ ಬೈತಿನ ಗೌರವಾನ್ವಿತ ವ್ಯಕ್ತಿಗಳೇ, ಅಲ್ಲಾಹನು ನಿಮ್ಮನ್ನು ಸಂರಕ್ಷಿಸಲಿ, ಹಝ್ರತ್ ಪೈಗಂಬರರನ್ನು(ಸ) ನಿಮ್ಮ ಮೂಲಕ ಸಂರಕ್ಷಿಸಲಿ. ಎಂದರೆ ನಿಮ್ಮ ಉತ್ತಮ ಮಾದರಿಗಳ ಮೂಲಕ ಹಝ್ರತ್ ಪೈಗಂಬರ್(ಸ) ಸದಾ ಜೀವಂತವಾಗಿರಲಿ. ನಾನು ನಿಮ್ಮನ್ನು ಅಲ್ಲಾಹನಿಗೆ ಒಪ್ಪಿಸುತ್ತೇನೆ. ನಿಮ್ಮ ಮೇಲೆ ಸಲಾಂ ಮತ್ತು ಅಲ್ಲಾಹನ ಕಾರುಣ್ಯ ವರ್ಷಿಸಲಿ ಎಂದು ಪ್ರಾರ್ಥಿಸುತ್ತೇನೆ. (ತಾರೀಖ್ ಅತ್ತಿಬರಿ, ಸಂಪುಟ-3, ಪುಟ-158, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಅಬುಸನಾನ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ಗಾಯಗೊಂಡಿದ್ದಾಗ ಅವರ ಯೋಗಕ್ಷೇಮ ವಿಚಾರಿಸಲು ನಾನು ಹೋದೆ. ನಾನು ಹೇಳಿದೆ: ಯಾ ಅಮೀರಲ್ ಮೂಮಿನೀನ್, ನಿಮ್ಮ ಈ ಗಾಯದ ಸ್ಥಿತಿಯನ್ನು ಕಂಡು ನಮಗೆ ತುಂಬ ಚಿಂತೆಯಾಗುತ್ತಿದೆ. ಹಝ್ರತ್ ಅಲಿ(ರ) ಹೇಳಿದರು: ಆದರೆ, ಅಲ್ಲಾಹನಾಣೆ ನನಗೆ ಯಾವುದೇ ಚಿಂತೆಯಿಲ್ಲ. ಏಕೆಂದರೆ ಸತ್ಯಸಂಧರಾದ ಮತ್ತು ಇತರರ ಸತ್ಯಕ್ಕೆ ಸಾಕ್ಷ್ಯವಹಿಸುವ ರಸೂಲ್(ಸ) ನನ್ನೊಡನೆ ಹೇಳಿದ್ದರು: ನಿನಗೆ ಇಂತಿಂತಹ ಜಾಗದಲ್ಲಿ ಗಾಯಗಳು ಆಗುವುವು. ಅವರು ನನ್ನ ಹಣೆಯ ಕಡೆಗೆ ಬೊಟ್ಟುಮಾಡಿ, ಅಲ್ಲಿಂದ ರಕ್ತ ಹರಿಯುವುದು, ಅದರಿಂದ ನಿನ್ನ ಗಡ್ಡ ಒದ್ದೆಯಾಗುವುದು ಎಂದು ಹೇಳಿದ್ದರು. ಒಂಟೆಯ ಹಿಂಗಾಲು ಸ್ನಾಯುರಜ್ಜುಗಳನ್ನು ಕತ್ತರಿಸಿದ ವ್ಯಕ್ತಿ ಸಮೂದ್ ಸಮುದಾಯದ ಅತ್ಯಂತ ನತದೃಷ್ಟ ವ್ಯಕ್ತಿಯಾಗಿದ್ದ ಹಾಗೆಯೇ, ನಿನ್ನ ಮೇಲೆ ಹಲ್ಲೆ ನಡೆಸುವವನು ಈ ಸಮುದಾಯದ ಅತ್ಯಂತ ಹತಭಾಗ್ಯ ವ್ಯಕ್ತಿಯಾಗುವನು ಎಂದು ಹೇಳಿದ್ದರು. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಭಾಗ-3, ಪುಟ-327, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್ ಸಂಖ್ಯೆ 4648, ದಾರುಲ್ ಫಿಕರ್ ಬೈರೂತ್ 2002)

ಒಂದು ವರದಿ ಹೀಗಿದೆ: ಹಝ್ರತ್ ಅಲಿ ತನ್ನ ಕೊಲೆಗಾರನಾದ ಇಬ್ನು ಮಲ್ಜಮಿನ ಬಗ್ಗೆ ಹೇಳಿದರು: ಇವನನ್ನು ಕುಳ್ಳಿರಿಸು. ನಾನು ಮೃತಪಟ್ಟರೆ, ಇವನನ್ನು ಕೊಂದುಹಾಕು. ಆದರೆ ಅವನ ದೇಹವನ್ನು ವಿರೂಪಗೊಳಿಸಬೇಡ. ನಾನು ಜೀವಂತವಾಗಿ ಇರುವವನಾದರೆ, ನಾನು ಸ್ವತಃ ಅವನನ್ನು ಕ್ಷಮಿಸುವ ಅಥವಾ ಅವನ ವಿರುದ್ಧ ಪ್ರತಿಕಾರ ತೀರಿಸುವ ಬಗ್ಗೆ ತೀರ್ಮ ನೀಡುವೆನು. (ಅಲ್‌ಇಸ್ತಿಆಬ್, ಸಂಪುಟ-3, ಪುಟ-219, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂಗತಿಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ:

ಒಬ್ಬ ವ್ಯಕ್ತಿ ಚೂರಿಯೊಂದಿಗೆ ಹಝ್ರತ್ ಅಲಿಯ ಮೇಲೆ ಹಲ್ಲೆ ನಡೆಸಿದ್ದರು ಎಂದು ಚರಿತ್ರೆಗಳಲ್ಲಿ ಬಂದಿದೆ. ಅವನು ಅವರ ಹೊಟ್ಟೆಯನ್ನು ಮುರಿದನು. ಹೇಗಿದ್ದರೂ ಇಲ್ಲಿ ಹೊಟ್ಟೆಯನ್ನು ಮುರಿದರು ಎಂದು ಬರೆದಿದ್ದಾರೆ. ತಲೆಗೆ ಗಾಯವಾಗಿತ್ತು. ಬಹುಶಃ ಹೊಟ್ಟೆಯ ಮೇಲೆ ಸಹ ಗಾಯವಾಗಿರಬಹುದು. ಹೇಗಿದ್ದರೂ, ಹೆಚ್ಚಿನ ವರದಿಗಳಲ್ಲಿ ತಲೆಗೆ ಗಾಯವಾಗಿತ್ತು ಎಂದು ಬಂದಿದೆ. ಹಲ್ಲೆ ಮಾಡಿದವನನ್ನು ಹಿಡಿಯಲಾಯಿತು. ಅವನೊಂದಿಗೆ ಹೇಗೆ ವರ್ತಿಸಬೇಕೆಂದು ಹಝ್ರತ್ ಅಲಿಯೊಡನೆ ಸಹಾಬಿಯರು ಕೇಳಿದರು. ಹಝ್ರತ್ ಅಲಿ(ರ) ಹಝ್ರತ್ ಇಮಾಂ ಹುಸೈನ್‌ರನ್ನು ಕರೆದು ಹೀಗೆ ವಸಿಯ್ಯತ್ ಮಾಡಿದರು: ನಾನು ಮೃತಪಟ್ಟರೆ ನನ್ನ ಜೀವಕ್ಕೆ ಬದಲಿಗೆ ಇವನ ಜೀವವನ್ನು ತೆಗೆಯಬೇಕು. ಆದರೆ ನಾನು ಬಚಾವಾದರೆ, ಅವನನ್ನು ಕೊಲ್ಲುವ ಆವಶ್ಯಕತೆಯಿಲ್ಲ. (ಖುತ್‌ಬಾತೆ ಮಹ್ಮೂದ್, ಸಂಪುಟ-16, ಪುಟ-428)

ಅಮ್ರ್ ಧೀಮುಲ್‌ಮುರ್ರ್ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ಗಾಯಗೊಂಡಾಗ ನಾನು ಅವರ ಮುಂದೆ ಹಾಜರಾದೆನು. ಅವರು ತಮ್ಮ ತಲೆಯನ್ನು ಬಟ್ಟೆಯಿಂದ ಸುತ್ತಿದ್ದರು. ನನಗೆ ಗಾಯವನ್ನು ತೋರಿಸಲು ನಾನು ಅವರೊಡನೆ ಹೇಳಿದೆನು. ಅವರು ಗಾಯದಿಂದ ಬಟ್ಟೆಯನ್ನು ಬಿಚ್ಚಿದರು. ಗಾಯ ಅಷ್ಟು ತೀವ್ರವಲ್ಲ. ಏನು ಆಗಲಿಕ್ಕಿಲ್ಲ ಎಂದು ನಾನು ಹೇಳಿದೆ. ಅವರು ಹೇಳಿದರು: ನಾನು ನಿಮ್ಮಿಂದ ಅಗಲುವೆನು. ಆಗ ಅವರ ಮಗಳಾದ ಉಮ್ಮೇ ಕುಲ್ಸುಮ್ ಪರದೆಯ ಹಿಂದಿನಿಂದ ಅತ್ತುಬಿಟ್ಟರು. ಅವರು ಮಗಳೊಡನೆ ಹೇಳಿದರು: ಅಳಬೇಡ, ನಾನು ನೋಡುತ್ತಿರುವುದನ್ನು ನೀನು ನೋಡುವಿಯಾದರೆ,

ನೀನು ಅಳಲಿಕ್ಕಿಲ್ಲ. ನೀವು ಏನನ್ನು ನೋಡುತ್ತಿದ್ದೀರಿ ಎಂದು ನಾನು ಅವರೊಡನೆ ಕೇಳಿದೆ. ಅವರು ಹೇಳಿದರು: ದೇವದೂತರ ಮತ್ತು ಪ್ರವಾದಿಯರ ಸಂಘವನ್ನು ನೋಡುತ್ತಿದ್ದೇನೆ. ಆ ದೃಶ್ಯದಲ್ಲಿ ಹಝ್ರತ್ ಪೈಗಂಬರ್(ಸ) ಸಹ ಇದ್ದರು. ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು: ಹೇ ಅಲಿ, ಸಂತೋಷಗೊಳ್ಳು, ಏಕೆಂದರೆ, ನೀನೀಗ ಇರುವ ಸ್ಥಳಕ್ಕಿಂತ ನೀನು ಹೋಗಲಿರುವ ಸ್ಥಳ ಉತ್ತಮವಾದುದಾಗಿದೆ. ಒಂದು ವರದಿಯಲ್ಲಿ ಹೀಗಿದೆ: ಹಝ್ರತ್ ಅಲಿ(ರ) ತನ್ನ ವಸಿಯ್ಯತ್ ಮಾಡಿದ ನಂತರ ಎಲ್ಲರೊಡನೆ ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹಿ ವಬರಕಾತುಹೂ ಎಂದು ಹೇಳಿದರು. ಅನಂತರ ಅವರು ಲಾ ಇಲಾಹ ಇಲ್ಲಲ್ಲಾಹ್ ಎಂದಲ್ಲದೆ ಬೇರೇನೂ ಹೇಳಲಿಲ್ಲ. ಅನಂತರ ಅವರು ನಿಧನರಾದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4,ಪುಟ–114–115, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಅಲಿ ಬಿನ್ ಅಬೂತಾಲಿಬ್ ನಿಧನರಾದಾಗ ಹಝ್ರತ್ ಹಸನ್ ಬಿನ್ ಅಲಿ ಪ್ರವಚನ ಪೀಠವನ್ನೇರಿ ಹೇಳಿದರು: ಹೇ ಜನರೇ, ಮೊದಲಿನವರು ಮತ್ತು ಇನ್ನು ಮುಂದೆ ಬರುವವರು ತಲುಪದ ಸ್ಥಾನವನ್ನು ಹೊಂದಿದ್ದ ಒಬ್ಬ ವ್ಯಕ್ತಿ ಇಂದು ನಿಧನರಾಗಿದ್ದಾರೆ. ಹಝ್ರತ್ ಪೈಗಂಬರ್(ಸ) ಅವರನ್ನು ಯಾವುದಾದರೂ ಪ್ರಧಾನ ಕೆಲಸಕ್ಕಾಗಿ ಕಳುಹಿಸುವಾಗ, ಅವರ ಬಲಗಡೆ ಜಿಬ್ರೀಲ್ ಮತ್ತು ಅವರ ಎಡಗಡೆ ಮೀಕಾಯಿಲ್ ಇರುತ್ತಿದ್ದರು. ಅವರ ಕೈಯ ಮೂಲಕ ಅಲ್ಲಾಹನು ವಿಜಯ ನೀಡದೇ ಅವರು ಮರಳುತ್ತಿರಲಿಲ್ಲ. ಅವರು ಕೇವಲ ಏಳುನೂರು ದಿರ್ಹಂ ಆಸ್ತಿಯಾಗಿ ಬಿಟ್ಟುಹೋಗಿರುವರು. ಆ ಹಣದಿಂದ ಒಬ್ಬ ಗುಲಾಮರನ್ನು ಖರೀದಿ ಮಾಡಲು ಅವರು ಇಚ್ಛಿಸಿದ್ದರು. ಅದೇ ರಾತ್ರಿ, ಎಂದರೆ ಹಝ್ರತ್ ಈಸಾ ಅಲೈಹಿಸ್ಸಲಾಂ ನಿಧನರಾದ ಅದೇ ರಾತ್ರಿ ಅವರು ನಿಧನರಾದರು. ಎಂದರೆ, ರಮಝಾನಿನ ಇಪ್ಪತ್ತೇಳನೇ ರಾತ್ರಿಯಂದು ವಫಾತ್ ಆದರು. ಒಂದು ವರದಿಯ ಪ್ರಕಾರ ಹಝ್ರತ್ ಅಲಿ(ರ) ಹದಿನೇಳನೇ ರಮಝಾನಿನ ರಾತ್ರಿ ಹಿಜರೀ 40ರಲ್ಲಿ ಶಹೀದ್ ಆದರು ಎಂದಿದೆ. ಅವರ ಖಿಲಾಫತ್ ಕಾಲಾವಧಿ ನಾಲ್ಕು ವರ್ಷ ಎಂಟುವರೆ ತಿಂಗಳಷ್ಟು ಆಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–28, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990) (ಅಲದದಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್‌ಖಲಾನಿ, ಸಂಪುಟ–4, ಪುಟ–468, ದಾರುಲ್ ಕುತುಬ ಇಲ್‌ಮಿಯ ಬೈರೂತ್ 2005)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ತಬ್‌ಖಾತ್ ಇಬ್ನು ಸಅದಿನ ಮೂರನೇ ಭಾಗದಲ್ಲಿ ಹಝ್ರತ್ ಅಲಿ ಕರ್‍ರಮುಲ್ಲಾಹ್ ವಜ್‌ಹಹುರ ನಿಧನದ ಬಗ್ಗೆ ಹಝ್ರತ್ ಇಮಾಂ ಹಸನ್ ವರದಿ ಮಾಡುತ್ತಾರೆ. ಇಮಾಂ ಹಸನ್ ಹೇಳಿದರು: ಹೇ ಜನರೇ, ಮೊದಲಿನವರು ಮತ್ತು ಇನ್ನು ಮುಂದೆ ಬರುವವರು ಕೆಲವು ವಿಷಯಗಳಲ್ಲಿ ತಲುಪದ ಸ್ಥಾನವನ್ನು ಹೊಂದಿದ್ದ ಒಬ್ಬ ವ್ಯಕ್ತಿ ಇಂದು ನಿಧನರಾಗಿದ್ದಾರೆ. ಹಝ್ರತ್ ಪೈಗಂಬರ್(ಸ) ಅವರನ್ನು ಯಾವುದಾದರೂ ಪ್ರಧಾನ ಕೆಲಸಕ್ಕಾಗಿ ಕಳುಹಿಸುವಾಗ, ಅವರ ಬಲಗಡೆ ಜಿಬ್ರೀಲ್ ಮತ್ತು ಅವರ ಎಡಗಡೆ ಮೀಕಾಯಿಲ್ ಇರುತ್ತಿದ್ದರು. ಅವರ ಕೈಯ ಮೂಲಕ ಅಲ್ಲಾಹನು ವಿಜಯ ನೀಡದೇ ಅವರು ಮರಳುತ್ತಿರಲಿಲ್ಲ. ಅವರು ಕೇವಲ ಏಳುನೂರು ದಿರ್ಹಂ ಆಸ್ತಿಯಾಗಿ ಬಿಟ್ಟುಹೋಗಿರುವರು. ಆ ಹಣದಿಂದ ಒಬ್ಬ ಗುಲಾಮರನ್ನು ಖರೀದಿ ಮಾಡಲು ಅವರು ಇಚ್ಛಿಸಿದ್ದರು. ಅದೇ ರಾತ್ರಿ, ಎಂದರೆ ಹಝ್ರತ್ ಈಸಾ ಅಲೈಹಿಸ್ಸಲಾಂ ನಿಧನರಾದ ಅದೇ ರಾತ್ರಿ ಅವರು ನಿಧನರಾದರು. ಎಂದರೆ, ರಮಝಾನಿನ ಇಪ್ಪತ್ತೇಳನೇ ರಾತ್ರಿಯಂದು ವಫಾತ್ ಆದರು. (ದಲ್‌ವತುಲ್ ಅಮೀರ್, ಅನ್ವಾರುಲ್ ಉಲೂಮ್, ಸಂಪುಟ–7, ಪುಟ–348)

ಹಝ್ರತ್ ಅಲಿಯ ಇಬ್ಬರು ಮಕ್ಕಳು ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಜಾಫರ್ ಅವರ ಸ್ನಾನ ಮಾಡಿಸಿದ್ದರು. ಅವರ ಮಗನಾದ ಹಝ್ರತ್ ಹಸನ್ ಜನಾಝ ನಮಾಝ್ ನಿರ್ವಹಿಸಿದರು. ಜನಾಝ ನಮಾಝಿನಲ್ಲಿ ನಾಲ್ಕು ತಕ್ಬೀರ್‌ಗಳನ್ನು ಹೇಳಿದರು. ಅವರಿಗೆ ಮೂರು ಬಟ್ಟೆಗಳಿಂದ ಕಫನ್ ಮಾಡಲಾಯಿತು. ಅದರಲ್ಲಿ ನಿಲುವಂಗಿ ಇರಲಿಲ್ಲ. ಅವರನ್ನು ಸಹರಿಯ ಸಮಯದಲ್ಲಿ ದಫನ್ ಮಾಡಲಾಯಿತು. ಹಝ್ರತ್ ಅಲಿಯ ಬಳಿಯಲ್ಲಿ, ಹಝ್ರತ್ ಪೈಗಂಬರರ(ಸ) ದೇಹದಲ್ಲಿ ಸವರಲಾದ ಸ್ವಲ್ಪ ಸುಗಂಧದ್ರವ್ಯವಿತ್ತು ಎಂದು ಹೇಳಲಾಗುತ್ತದೆ. ಆ ಸುಗಂಧದ್ರವ್ಯವನ್ನು ಅವರ ಮಯ್ಯಿತ್ತಿನಲ್ಲಿ ಸವರಬೇಕು ಎಂಬುದಾಗಿ ಹಝ್ರತ್ ಅಲಿ(ರ) ವಸಿಯ್ಯತ್ ಮಾಡಿದ್ದರು.

ಹಝ್ರತ್ ಅಲಿಯ ವಯಸ್ಸಿನ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರ ಪ್ರಕಾರ ಅವರಿಗೆ 57 ವರ್ಷವಿತ್ತು. ಕೆಲವರ ಅಭಿಪ್ರಾಯದಲ್ಲಿ ಅವರಿಗೆ 58 ವಯಸ್ಸಿತ್ತು. ಇನ್ನು ಕೆಲವರ ಪ್ರಕಾರ ಅವರಿಗೆ 65 ವರ್ಷವಿತ್ತು. ಕೆಲವರ ಪ್ರಕಾರ ಅವರಿಗೆ ಮರಣದ ಸಮಯದಲ್ಲಿ 63 ವಯಸ್ಸಿತ್ತು. ಆದಾಗ್ಯೂ ಹೆಚ್ಚಿನವರು ಅವರಿಗೆ 63 ವಯಸ್ಸಿತ್ತು ಎಂಬುದು ಹೆಚ್ಚು ಸರಿಯೆಂದು ಅಭಿಪ್ರಾಯ ಪಟ್ಟಿದ್ದಾರೆ. (ಅಸದುಲ್‌ಗಾಬ ಫೀಮಾರಿಫತೊಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–115, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಅಲಿಯ ಖಬರ್ ಎಲ್ಲಿದೆ ಎಂಬುದರ ಬಗ್ಗೆ ಸಹ ಸವಾಲಿದೆ. ಇದರ ಬಗ್ಗೆ ಚರಿತ್ರೆಯ ಪುಸ್ತಕಗಳಲ್ಲಿ ಬೇರೆ ಬೇರೆ ವರದಿಗಳು ಲಭಿಸುತ್ತವೆ. ಅವುಗಳು ಹೀಗಿವೆ: ಹಝ್ರತ್ ಅಲಿಯನ್ನು ರಾತ್ರಿ ಸಮಯದಲ್ಲಿ ಕೂಫದಲ್ಲಿ ದಫನ್ ಮಾಡಲಾಗಿತ್ತು. ಅವರನ್ನು ದಫನ್ ಮಾಡಿದ್ದನ್ನು ರಹಸ್ಯವಾಗಿ ಇಡಲಾಗಿತ್ತು. ಹಝ್ರತ್ ಅಲಿಯನ್ನು ಕೂಫದ ಜಾಮಿ ಮಸೀದಿಯಲ್ಲಿ ದಫನ್ ಮಾಡಲಾಗಿತ್ತು. ಹಝ್ರತ್ ಇಮಾಂ ಹಸನ್ ಮತ್ತು ಇಮಾಂ ಹುಸೈನ್ ಹಝ್ರತ್ ಅಲಿಯ ಮೃತದೇಹವನ್ನು ಮದೀನಕ್ಕೆ ಸ್ಥಳಾಂತರಿಸಿದ್ದರು ಮತ್ತು ಹಝ್ರತ್ ಫಾತಿಮಾರ ಖಬರಿನ ಬಳಿ, ಜನ್ನತುಲ್ ಬಖೀಯಲ್ಲಿ ದಫನ್ ಮಾಡಲಾಯಿತು. ಒಂದು ವರದಿ ಪ್ರಕಾರ, ಹಸನ್ ಮತ್ತು ಹುಸೈನ್ ರಝಿಯಲ್ಲಾಹು ಅನ್‌ಹುಂ ಹಝ್ರತ್ ಅಲಿಯ ಮೃತದೇಹವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿಕೊಂಡು ಒಂಟೆಯ ಮೇಲೆ ಇರಿಸಿದ ನಂತರ, ಆ ಒಂಟೆಯು ಕಾಣೆಯಾಯಿತು.ಆ ಒಂಟೆಯನ್ನು ತೈ ಗೋತ್ರದವರು ಹಿಡಿದರು. ಆ ಪೆಟ್ಟಿಗೆಯಲ್ಲಿ ಸಂಪತ್ತಿದೆ ಎಂದು ಅವರು ಭಾವಿಸಿದ್ದರು. ಅದರಲ್ಲಿ ಮೃತದೇಹವನ್ನು ಕಂಡಾಗ, ಅದು ಯಾರದ್ದೆಂದು ಅವರಿಗೆ ಗೊತ್ತಾಗಲಿಲ್ಲ. ಅವರು ಆ ಮೃತದೇಹವನ್ನು ಪೆಟ್ಟಿಗೆ ಸಮೇತ ದಫನ್ ಮಾಡಿದರು. ಹಝ್ರತ್ ಅಲಿಯ ಖಬರ್ ಎಲ್ಲಿದೆ ಎಂದು ಯಾರಿಗೂ ಗೊತ್ತಿಲ್ಲ. ಮತ್ತೊಂದು ವರದಿಯಲ್ಲಿ ಹೀಗಿದೆ: ಹಝ್ರತ್ ಹಸನ್ ಹಝ್ರತ್ ಅಲಿಯನ್ನು ಕೂಫದಲ್ಲಿ ಜಾದ ಬಿನ್ ಖುಬೀರದ ಕುಟುಂಬದ ಯಾವುದೋ ಕೊಠಡಿಯಲ್ಲಿ ದಫನ್ ಮಾಡಿದ್ದರು. ಜಾದ ಹಝ್ರತ್ ಅಲಿಯ ಮೊಮ್ಮಗನಾಗಿದ್ದನು ಎಂದು ಹೇಳಲಾಗುತ್ತದೆ.

ಇಮಾಂ ಜಾಫರ್ ಹೇಳುತ್ತಾರೆ: ರಾತ್ರಿ ಸಮಯದಲ್ಲಿ ಹಝ್ರತ್ ಅಲಿಯ ಜನಾಝ ನಮಾಝ್ ನಿರ್ವಹಿಸಲಾಗಿತ್ತು. ಕೂಫದಲ್ಲಿ ಅವರನ್ನು ದಫನ್ ಮಾಡಲಾಗಿತ್ತು. ಅವರ ಖಬರಿನ ಸ್ಥಳವನ್ನು ರಹಸ್ಯವಾಗಿ ಇಡಲಾಗಿತ್ತು.ಆದಾಗ್ಯೂ ಅದು ಖಸ್ರೇ ಇಮಾರತಿನ ಬಳಿಯಿತ್ತು. ಇನ್ನೊಂದು ವರದಿಯ ಪ್ರಕಾರ: ಹಝ್ರತ್ ಅಲಿಯ ನಿಧನದ ನಂತರ ಹಝ್ರತ್ ಇಮಾಂ ಹಸನ್ ಹಝ್ರತ್ ಅಲಿಯ ಜನಾಝ ನಿರ್ವಹಿಸಿದ್ದರು. ಕೂಫದ ಹೊರಗೆ ಹಝ್ರತ್ ಅಲಿಯನ್ನು ದಫನ್ ಮಾಡಲಾಗಿತ್ತು. ಖವಾರಿಜಿಯರು ಅಥವಾ ಬೇರೆ ಯಾರಾದರೂ ಅವರ ಖಬರನ್ನು ಕೆಡವಿ ಅಪಮರ್ಯಾದೆಯ ಕೃತ್ಯಗಳನ್ನು ಮಾಡದಿರಲು ಅವರ ಖಬರನ್ನು ರಹಸ್ಯವಾಗಿ ಇಡಲಾಗಿತ್ತು. ಕೆಲವು ಶಿಯಾರ ಪ್ರಕಾರ, ಹಝ್ರತ್ ಅಲಿಯ ಗೋರಿ ನಜಫಿನಲ್ಲಿದೆ. ಈಗ ಆ ಸ್ಥಳವನ್ನು ಮಶ್‌ಹದುಲ್ ನಜಫ್ ಎಂದು ಹೇಳಲಾಗುತ್ತದೆ. ಒಂದು ವರದಿಯ ಪ್ರಕಾರ ಕೂಫದಲ್ಲಿ ಅವರನ್ನು ಶಹೀದ್ ಮಾಡಲಾಗಿತ್ತು. ಆದಾಗ್ಯೂ ಅವರ ಖಬರ್ ಎಲ್ಲಿದೆ ಎಂದು ಗೊತ್ತು ಮಾಡಲಾಗಿಲ್ಲ. ಹಝ್ರತ್ ಅಲಿಯ ವಫಾತಿನ ನಂತರ ಹಝ್ರತ್ ಇಮಾಂ ಹಸನ್ ಹಝ್ರತ್ ಅಲಿಯ ಜನಾಝ ನಿರ್ವಹಿಸಿದ್ದರು. ಖವಾರಿಜಿಯರು ಅವರ ಖಬರನ್ನು ಕೆಡವಿ ಅಪಮರ್ಯಾದೆಯ ಕೃತ್ಯಗಳನ್ನು ಮಾಡದಿರಲು ಕೂಫದ ದಾರುಲ್ ಇಮಾರತಿನಲ್ಲಿ ಹಝ್ರತ್ ಅಲಿಯನ್ನು ದಫನ್ ಮಾಡಲಾಯಿತು.

ಅಲ್ಲಾಮ ಇಬ್ನು ಅಸೀರ್ ಬರೆಯುತ್ತಾರೆ. ಈ ವರದಿ ಪ್ರಸಿದ್ಧವಾದುದಾಗಿದೆ. ಅವರು ಬರೆಯುತ್ತಾರೆ: ಹಝ್ರತ್ ಅಲಿಯ ಮೃತದೇಹವನ್ನು ಸವಾರಿಮೃಗದ ಮೇಲೆ ಇರಿಸಲಾಯಿತು ಮತ್ತು ಅದು ಅದನ್ನು ಕೊಂಡುಹೋಯಿತು. ಆ ಸವಾರಿ ಮೃಗ ಎಲ್ಲಿಗೆ ಹೋಯಿತೆಂದು ಯಾರಿಗೂ ಗೊತ್ತಿಲ್ಲ. ಹಝ್ರತ್ ಅಲಿಯ ಖಬರ್ ಮಶ್‌ಹದುಲ್ ನಜಫಿನಲ್ಲಿದೆ. ಆದರೆ ಇದು ಸರಿಯಲ್ಲ. ಅವರಿಗೆ ಗೊತ್ತಿಲ್ಲದ ಸಂಗತಿಯ ಬಗ್ಗೆ ಅವರು ಹೇಳಿದ್ದಾರೆ. ಇದನ್ನು ಬುದ್ಧಿ ಅಥವಾ ಪುರಾವೆಗಳು ಸಮ್ಮತಿಸುವುದಿಲ್ಲ. ಹಝ್ರತ್ ಅಲಿಯ ಗೋರಿ ಮಶ್‌ಹದುಲ್ ನಜಫಿನಲ್ಲಿದೆ ಎಂದು ಹೆಚ್ಚಿನ ಅಜ್ಞಾನಿಗಳು ನಂಬುತ್ತಾರೆ. ಇದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಇದರಲ್ಲಿ ಯಾವುದೇ ಸತ್ಯವೂ ಇಲ್ಲ. ಬದಲಿಗೆ ಅಲ್ಲಿ ಹಝ್ರತ್ ಮುಗೈರ ಬಿನ್ ಶೇಬರ ಖಬರಿದೆ ಎಂದು ಹೇಳಲಾಗುತ್ತದೆ. (ಅಲದ'ದ'ಬಿದಾಂಉ ವನ್ನಹಾಯ, ಸಂಪುಟ–4, ಭಾಗ–7, ಪುಟ–316–317, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ತಾರೀಖ್ ಅತ್ತಿಬರಿ, ಸಂಪುಟ–3, ಪುಟ–477, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1987)

ಇಬ್ನು ಇಮಾಂ ಇಬ್ನು ತೈಮಿಯ ಹೇಳುತ್ತಾರೆ: ನಜಫಿನಲ್ಲಿ ಮಶ್‌ಹದ್ ಎಂಬ ಪ್ರದೇಶ, ಹಝ್ರತ್ ಅಲಿಯ ಖಬರಿನ ಸ್ಥಳವಲ್ಲವೆಂದೂ ಬದಲಿಗೆ ಅದು ಹಝ್ರತ್ ಮುಗೈರ ಬಿನ್ ಶೇಬರ ಖಬರಾಗಿದೆ ಎಂದು ಅರಿವುಳ್ಳವರು ಒಮ್ಮತಾಭಿಪ್ರಾಯದಿಂದ ಒಪ್ಪಿದ ಸಂಗತಿಯಾಗಿದೆ. ಶಿಯಾರ ಆಡಳಿತ ಮತ್ತು ಮುನ್ನೂರು ವರ್ಷಗಳಿಗಿಂತ ಹೆಚ್ಚಿನ ಕಾಲದ ವರೆಗೆ ಅವರು ಅಲ್ಲಿಗೆ ಹೋಗುತ್ತಿದ್ದರೂ ಅದು ಹಝ್ರತ್ ಅಲಿಯ ಖಬರೆಂದು ಶಿಯಾರು ಮತ್ತು ಇತರ ಮುಸ್ಲಿಮರು ಹೇಳಿರಲಿಲ್ಲ. ಹಝ್ರತ್ ಅಲಿ ಶಹೀದಾದ ಮುನ್ನೂರು

ವರ್ಷಗಳ ನಂತರ ಈ ಸ್ಥಳಕ್ಕೆ ಮಶ್‌ಹದೇ ಅಲಿ ಎಂಬ ಹೆಸರು ನೀಡಲಾಗಿತ್ತು. ಆದ್ದರಿಂದ ಇದು ಹಝ್ರ‌ತ್ ಅಲಿಯ ಖಬರ್ ಆಗಿದೆ ಎಂಬ ಈ ವರದಿ ತಪ್ಪಾಗಿದೆ. (ಇನ್‌ಸೈಕ್ಲೋಪೀಡಿಯ, ಸೀರತ್ ಸಹಾಬ, ಸಂಪುಟ-1, ಪುಟ-436, ದಾರುಸ್ಸಲಾಮ್ ರಿಯಾಝ್ 1438ಹಿ)

ಮೇಲೆ ಉಲ್ಲೇಖಿಸಿಲಾದ ವಿವಿಧ ವರದಿಗಳನ್ನು ತನ್ನ ಚರಿತ್ರೆಯ ಪುಸ್ತಕದಲ್ಲಿ ಬರೆದ ನಂತರ ಅಲ್ಲಾಮ ಇಬ್ನು ಜೂಝಿ ಬರೆಯುತ್ತಾರೆ: ವಲ್ಲಾಹು ಅಅ್‌ಲಮು ಅಯ್ಯುಲ್ ಅಖ್‌ವಾಲು ಅಸಹ್ಹ್. ಇವುಗಳಲ್ಲಿ ಯಾವ ಸಂಗತಿ ಹೆಚ್ಚು ಸರಿಯೆಂದು ಅಲ್ಲಾಹನೇ ಬಲ್ಲವನು. (ಅಲ್‌ಮುನ್ತಝಮ್, ಸಂಪುಟ-5, ಪುಟ-178, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರ‌ತ್ ಅಲಿ(ರ) ವಿವಿಧ ಸಮಯಗಳಲ್ಲಿ ಎಂಟು ವಿವಾಹಗಳನ್ನು ಮಾಡಿದ್ದರು ಎಂದು ವರದಿಯಾಗಿದೆ. ಅವರ ಪತ್ನಿಯರ ಮತ್ತು ಮಕ್ಕಳ ಹೆಸರುಗಳು ಹೀಗಿವೆ: ಫಾತಿಮಾ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಖೌಲ ಬಿನ್ತ್ ಜಾಫರ್ ಬಿನ್ ಖೈಸ್, ಲೈಲ ಬಿನ್ತ್ ಮಸ್‌ಊದ್ ಬಿನ್ ಖಾ‌ಲಿದ್, ಉಮ್ಮುಲ್ ಬನೀನ್ ಬಿನ್ತ್ ಹಝಾ‌ಂ ಬಿನ್ ಖಾ‌ಲಿದ್, ಅಸ್ಮಾ ಬಿನ್ತ್ ಅಮೀಸ್, ಸುಹ್‌ಬ ಉಮ್ಮೇ ಹಬೀಬ್ ಬಿನ್ತ್ ರಬೀಅ, ಉಮಾಮ ಬಿನ್ತ್ ಅಬುಲ್‌ಆಸ್ ಬಿನ್ ರಬೀಅ್. ಇವರು ಹಝ್ರ‌ತ್ ಪೈಗಂಬರರ ಮಗಳಾದ ಝೈನಬಿನ ಮಗಳು, ಎಂದರೆ ಹಝ್ರ‌ತ್ ಪೈಗಂಬರರ ಮೊಮ್ಮಗಳಾಗಿದ್ದರು. ಉಮ್ಮೇ ಸಈದ್ ಬಿನ್ತ್ ಉರ್‌ವ ಬಿನ್ ಮಸ್‌ಊದ್ ಸಖ್‌ಫಿ, ಈ ಪತ್ನಿಯರ ಮೂಲಕ ಅಲ್ಲಾಹನು ಅವರಿಗೆ ಬಹಳ ಹೆಚ್ಚು ಮಕ್ಕಳನ್ನು ಪ್ರದಾನಮಾಡಿದ್ದನು. ಅವುಗಳ ಸಂಖ್ಯೆ ಮೂವತ್ತಕ್ಕಿಂತ ಹೆಚ್ಚಾಗಿದ್ದುವು. ಹದಿನಾಲ್ಕು ಪುತ್ರರು ಮತ್ತು ಹತ್ತೊಂಬತ್ತು ಪುತ್ರಿಯರು. ಅವರ ಸಂತಾನ ಪರಂಪರೆ ಹಝ್ರ‌ತ್ ಹಸನ್, ಹಝ್ರ‌ತ್ ಹುಸೈನ್, ಮುಹಮ್ಮದ್ ಬಿನ್ ಹನ್‌ಫಿಯ, ಅಬ್ಬಾಸ್ ಬಿನ್ ಕಲಾಬಿಯ ಮತ್ತು ಅಮ್ರ್ ಬಿನ್ ತಗ್‌ಲಬಿಯರ ಮೂಲಕ ಮುಂದುವರೆಯಿತು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-14, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರ‌ತ್ ಅಲಿಯ ಸ್ವಭಾವ ವೈಶಿಷ್ಟ್ಯಗಳು ಮತ್ತು ಶ್ರೇಷ್ಠಗುಣಗಳ ಬಗ್ಗೆ ಬರೆಯಲಾಗಿದೆ. ಹಝ್ರ‌ತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ಹೇಳಿದ್ದರು: **ಅನ ಮದೀನತುಲ್ ಇಲ್ಮ್ ವ ಅಲಿ ಬಾಬುಹಾ. ವಮನ್ ಅರಾದಲ್ ಮದೀನತುಹು ಫಲ್‌ಯಅ್‌ತಿಲ್ ಬಾಬ.** ಎಂದರೆ ನಾನು ಜ್ಞಾನದ ಪಟ್ಟಣವಾಗಿರುವೆನು ಮತ್ತು ಅಲಿ ಅದರ ಬಾಗಿಲಾಗಿರುವರು. ಈ ಪಟ್ಟಣವನ್ನು ಪ್ರವೇಶಿಸಲು ಯಾರಾದರೂ ಇಚ್ಛಿಸುವವರಾದರೆ ಅವರ ಈ ಬಾಗಿಲ ಬಳಿ ಬರಬೇಕು.(ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಭಾಗ-3, ಪುಟ-339, ಮಾರಿಫತಿಸ್ಸಹಾಬ, ದಾರುಲ್ ಫಿಕರ್ 2002)

ಹಝ್ರ‌ತ್ ಮುಸ್ಲಿಹ್ ಮೌಊದ್(ರ) ವರದಿ ಮಾಡುತ್ತಾರೆ: ಹಝ್ರ‌ತ್ ಅಲಿ(ರ) ಒಂದು ಸಲ ಹೇಳಿದರು: ಸಹಾಬರಲ್ಲಿ ಅತ್ಯಂತ ಧೈರ್ಯಶಾಲಿ ಮತ್ತು ಶೂರ ಹಝ್ರ‌ತ್ ಅಬೂಬಕರ್(ರ) ಆಗಿದ್ದರು. ಬದ್ರ್ ಯುದ್ಧದಲ್ಲಿ ಹಝ್ರ‌ತ್ ಪೈಗಂಬರರಿಗೆ(ಸ) ಒಂದು ಡೇರೆಯನ್ನು ತಯಾರು ಮಾಡಲಾಗಿತ್ತು. ಇಂದು ಹಝ್ರ‌ತ್ ಪೈಗಂಬರರ(ಸ) ಸಂರಕ್ಷಣೆಯ ಜವಾಬ್ದಾರಿ ಯಾರು ವಹಿಸುವರು ಎಂಬ ಸವಾಲು ಆಗ ಉಂಟಾಗಿತ್ತು. ಹಝ್ರ‌ತ್ ಅಬೂಬಕರ್(ರ) ಬೇಗನೇ ತೆರೆದ ಖಡ್ಗದೊಂದಿಗೆ ನಿಂತರು. ಅವರು ಅಂತಹ ಅಪಾಯಕಾರಿ ಸಂದರ್ಭದಲ್ಲಿ ಅತ್ಯಂತ ಧೈರ್ಯದಿಂದ ಹಝ್ರ‌ತ್ ಪೈಗಂಬರರ(ಸ) ಸಂರಕ್ಷಣೆಯ ಕೆಲಸವನ್ನು ಈಡೇರಿಸಿದರು. ಅದೇ ರೀತಿಯಲ್ಲಿ ಹದೀಸುಗಳಲ್ಲಿ ಬಂದಿದೆ. ಒಂದು ಸಲ ಹಝ್ರ‌ತ್ ಪೈಗಂಬರ್(ಸ) ಹೇಳಿದರು: **ಅನ ಮದೀನತುಲ್ ಇಲ್ಮ್ ವ ಅಲಿ ಬಾಬುಹಾ.** ಎಂದರೆ ನಾನು ಅರಿವಿನ ಪಟ್ಟಣವಾಗಿದ್ದೇನೆ ಮತ್ತು ಅಲಿ ಅದರ ಬಾಗಿಲಾಗಿರುವರು. ಒಟ್ಟಿನಲ್ಲಿ ಹಝ್ರ‌ತ್ ಅಲಿಯನ್ನು ಸಹ ಹಝ್ರ‌ತ್ ಪೈಗಂಬರ್(ಸ) ಪಂಡಿತರಲ್ಲಿ ಸೇರಿಸಿ ಹೇಳಿದ್ದರು. ಖೈಬರ್ ಯುದ್ಧದಲ್ಲಿ ಅತ್ಯಂತ ಅಪಾಯಕಾರಿ ಸಮಯದಲ್ಲಿ ಇಸ್ಲಾಮಿನ ಬಾವುಟವನ್ನು ಹಝ್ರ‌ತ್ ಪೈಗಂಬರ್(ಸ) ಹಝ್ರ‌ತ್ ಅಲಿಯ ಕೈಗೆ ಒಪ್ಪಿಸಿದ್ದರು. ಇದರಿಂದ ಗೊತ್ತಾಗುವುದೇನೆಂದರೆ, ಹಝ್ರ‌ತ್ ಪೈಗಂಬರರ ಕಾಲದಲ್ಲಿ ಪಂಡಿತರು ಭೀರುಗಳಾಗಿರಲಿಲ್ಲ. ಬದಲಿಗೆ ಎಲ್ಲರಿಗಿಂತ ಧೈರ್ಯಶಾಲಿಯಾಗಿದ್ದರು. ಪಂಡಿತರ ಧೈರ್ಯಕ್ಕೆ ಸಂಬಂಧಿಸಿದ ವಿಷಯದಲ್ಲಿ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಇದನ್ನು ಹೇಳಿದ್ದರು. (ತಫ್ಸೀರೆ ಕಬೀರ್, ಸಂಪುಟ-7, ಪುಟ-364-365)

ಹಝ್ರ‌ತ್ ಅಲಿ(ರ) ಹೇಳುತ್ತಾರೆ: ಒಂದು ಸಮಯದಲ್ಲಿ ನಾನು ಹಸಿವೆಯ ಕಾರಣದಿಂದ ಹೊಟ್ಟೆಯ ಮೇಲೆ ಕಲ್ಲುಗಳನ್ನು ಕಟ್ಟುತ್ತಿದ್ದೆ. ಆದರೆ ಇಂದು ನನ್ನ ಝಕಾತ್ ನಾಲ್ಕು ಸಾವಿರ ದೀನಾರ್ ತನಕ ತಲುಪಿದೆ. ಒಂದು ವರದಿಯಲ್ಲಿ ನಾಲ್ವತ್ತು ದೀನಾರಿನ ಪ್ರಸ್ತಾಪವಿದೆ. ಅಬೂಬಹರ್ ತನ್ನೊಂದು ಉಸ್ತಾದಿನಿಂದ ವರದಿ ಮಾಡುತ್ತಾರೆ: ನಾನು ಹಝ್ರ‌ತ್ ಅಲಿ(ರ) ದಪ್ಪವಾದ ಸಲ್ವಾರ್ ಧರಿಸಿದ್ದಾಗಿ ಕಂಡೆನು. ಅದನ್ನು ಐದು ದಿರ್ಹಮ್ ಕೊಟ್ಟು ಖರೀದಿ ಮಾಡಿದ್ದೇನೆ. ಯಾರು ನನಗೆ ಒಂದು ದಿರ್ಹಂ ಹೆಚ್ಚಾಗಿ ಕೊಡುತ್ತಾರೋ ಅವರಿಗೆ ನಾನು ಇದನ್ನು ಮಾರಾಟಮಾಡುತ್ತೇನೆ ಎಂದು ಹಝ್ರ‌ತ್ ಅಲಿ ಹೇಳಿದರು. ವರದಿಗಾರ ಹೇಳುತ್ತಾರೆ: ನಾನು ಹಝ್ರ‌ತ್ ಅಲಿಯ ಬಳಿ ಕೆಲವು ದಿರ್ಹಮ್‌ಗಳು ಇರುವ ಚೀಲವನ್ನು ಕಂಡೆನು. ಅವರು ಹೇಳಿದರು: ಇದು ಯಂಬೂವಿನ ಆಸ್ತಿಯಲ್ಲಿ ನಮ್ಮ ಉಳಿದ ಹಣವನಾಗಿದೆ. ಯನ್‌ಬೂ ಒಂದು ಗ್ರಾಮವಾಗಿದೆ. ಅದು ಮದೀನದಿಂದ ಏಳು ಮೈಲು ದೂರದಲ್ಲಿ ಸಮುದ್ರ ತೀರದ ಕಡೆಯಿದೆ. ಹಝ್ರ‌ತ್ ಅಲಿಯ ಉಂಗುರದಲ್ಲಿ ಅಲ್ಲಾಹುಲ್ ಮಲಿಕ್ ಎಂದು ಕೆತ್ತಲಾಗಿತ್ತು. ಎಂದರೆ ಅಲ್ಲಾಹನೇ ಯಥಾರ್ಥ ಅರಸ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ-3, ಪುಟ-22, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-22, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990) (ಲುಗಾತುಲ್ ಹದೀಸ್, ಸಂಪುಟ-4, ಪುಟ-613, ನುಮಾನ ಕುತುಬ್ ಖಾನ ಲಾಹೋರ್ 2005)

ಜಮೀಅ್ ಬಿನ್ ಉಮೈರ್ ವರದಿ ಮಾಡುತ್ತಾರೆ: ನಾನು ಹಝ್ರ‌ತ್ ಆಇಶರ(ರ) ಬಳಿಗೆ ನನ್ನ ತಂದೆಯ ಸಹೋದರಿಯೊಂದಿಗೆ ಬಂದೆನು. ಅವರು ಕೇಳಿದರು: ಜನರಲ್ಲಿ ಹಝ್ರ‌ತ್ ಪೈಗಂಬರರಿಗೆ ಅತ್ಯಂತ ಪ್ರಿಯರು ಯಾರಾಗಿದ್ದರು? ಹಝ್ರ‌ತ್ ಫಾತಿಮ(ರ) ಎಂದು ಹಝ್ರ‌ತ್ ಆಇಶ(ರ) ಹೇಳಿದರು. ಪುರುಷರಲ್ಲಿ ಯಾರೆಂದು ಕೇಳಲಾಯಿತು. ಹಝ್ರ‌ತ್ ಅಲಿ(ರ) ಎಂದು ಹಝ್ರ‌ತ್ ಆಇಶ(ರ) ಹೇಳಿದರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್ 3874)

ಹಝ್ರ‌ತ್ ಸಅ್‌ಲಬ ಬಿನ್ ಅಬೂಮಾಲಿಕ್ ವರದಿ ಮಾಡುತ್ತಾರೆ: ಪ್ರತಿಯೊಂದು ಯುದ್ಧ ಮೈದಾನದಲ್ಲಿ ಹಝ್ರ‌ತ್ ಪೈಗಂಬರರ(ಸ) ಕಡೆಯಿಂದ ಹಝ್ರ‌ತ್ ಸಅದ್ ಬಿನ್ ಉಬಾದ ಧ್ವಜವಾಹಕರಾಗಿದ್ದರು. ಆದರೆ ಹೋರಾಟದ ಸಮಯದಲ್ಲಿ ಹಝ್ರ‌ತ್ ಅಲಿ ಬಿನ್ ಅಬೂತಾಲಿಬ್(ರ) ಧ್ವಜವನ್ನು ಹಿಡಿಯುತ್ತಿದ್ದರು. (ಅಸದುಲ್‌ಗಾಬ, ಸಂಪುಟ-4, ಪುಟ-93, ದಾರುಲ್ ಫಿಕರ್ ಲಿತ್ತಬಾಅ ವನ್ನಶರ್ ಡ ತ್ತವಾಝೀ ಬೈರೂತ್ 2003)

ಸಖೀಫ್ ಗೋತ್ರದ ಒಬ್ಬ ವ್ಯಕ್ತಿ ವರದಿ ಮಾಡುತ್ತಾರೆ: ಹಝ್ರ‌ತ್ ಅಲಿ(ರ) ನನ್ನನ್ನು ಸಾಬೂರ್ ಪ್ರದೇಶದ ಅಧಿಕಾರಿಯನ್ನಾಗಿ ಕಳುಹಿಸಿದ್ದರು. ಇದು ಪೇರ್ಶಿಯದ ಒಂದು ಪ್ರದೇಶವಾಗಿದೆ. ಇದು ಶೀರಾಝಿನಿಂದ ಸುಮಾರು ನೂರು ಮೈಲುಗಳ ದೂರದಲ್ಲಿದೆ. ಹಝ್ರ‌ತ್ ಅಲಿ(ರ) ನನ್ನೊಡನೆ ಹೇಳಿದರು: ಯಾವನೇ ವ್ಯಕ್ತಿಯನ್ನು ಒಂದು ದಿರ್ಹಂ ಟಾಕ್ಸ್‌ಗಾಗಿ ಹೊಡೆಯಬೇಡ. ಜನರ ಸಂಪತ್ತಿನ ಹಿಂದೆ ಬೀಳಬೇಡ. ಚಳಿಗಾಲದಲ್ಲಿ ಮತ್ತು ಬೇಸಿಗೆಗಾಲದಲ್ಲಿ ಅವರ ಬಟ್ಟೆಗಳ ಹಿಂದೆ ಸಹ ಬೀಳಬೇಡ. ಎಂದರೆ, ಅವರಿಗೆ ಆವಶ್ಯವಾದ ವಸ್ತ್ರ ಸಹ ಇಲ್ಲದಂತೆ ಮಾಡುವ ರೀತಿಯಲ್ಲಿ ಟೇಕ್ಸ್ ವಸೂಲು ಮಾಡಬೇಡ. ಅವರು ಉಪಯೋಗಿಸುತ್ತಿರುವ ಸವಾರಿಮೃಗಗಳನ್ನು ವಸೂಲು ಮಾಡಬೇಡ. ಒಂದು ದಿರ್ಹಮಿಗಾಗಿ ಯಾರನ್ನೂ ತೊಂದರೆಗೆ ಸಿಲುಕಿಸಬೇಡ. ಎಂದರೆ ಟಾಕ್ಸ್ ಪಡೆಯುವ ವಿಷಯದಲ್ಲಿ ಯಾರನ್ನೂ ತೊಂದರೆಗೆ ಸಿಲುಕಿಸಬಾರದು. ಹೊರಲಾರದಷ್ಟು ಟಾಕ್ಸಿನ ಭಾರವನ್ನು ಅವರ ಮೇಲೆ ಹಾಕಬಾರದು. ಆಗ ನಾನು ಹೇಳಿದೆ: ಹಾಗಾದರೆ, ನಾನು ಹೋದಂತೆಯೇ ಮರಳಿಬರಬೇಕಾಗುವುದು. ಏನೂ ಸಿಗಲಿಕ್ಕಿಲ್ಲ. ಹಝ್ರ‌ತ್ ಅಲಿ(ರ) ಹೇಳಿದರು: ನಿನಗೆ ಒಳಿತಾಗಲಿ. ಹೌದು, ಬರೀ ಕೈಯೊಂದಿಗೆ ಬರಬೇಕಾಗಿ ಬಂದರೂ ಸರಿ. ಜನರ ಆವಶ್ಯಕ್ಕಿಂತ ಅಧಿಕವಿರುವ ಸಂಪತ್ತಿನಿಂದ ವಸೂಲು ಮಾಡಲು ನಮ್ಮನ್ನು ಆಜ್ಞಾಪಿಸಲಾಗಿದೆ. (ಅಸದುಲ್‌ಗಾಬ ಲಿಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ-4, ಪುಟ-98, ದಾರುಲ್ ಫಿಕರ್ ಲಿತ್ತಬಾಅ ವನ್ನಶರ್ ವತ್ತವಾಝೀ ಬೈರೂತ್ 2003) (ಮುಜಮುಲ್ ಬಲದಾನ್, ಸಂಪುಟ-3, ಪುಟ-188)

ಹಝ್ರ‌ತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರ‌ತ್ ಪೈಗಂಬರ್(ಸ) ಹಝ್ರ‌ತ್ ಅಲಿಯೊಡನೆ(ರ) ಹೇಳಿದರು: ನೀನು ನನ್ನ ಸಹೋದರ ಮತ್ತು ಸ್ನೇಹಿತನಾಗಿರುವೆ. (ಕನ್ಝುಲ್ ಅಮಾಲ್, ಸಂಪುಟ-13, ಪುಟ-109, ಹದೀಸ್ 36356, ಫಝಾಎಲ್ ಅಲಿ, ಮುಅಸ್ಸಸರ್ರಿಸಾಲ 1981)

ಅಲಿ ಬಿನ್ ರಬೀಅ ವರದಿ ಮಾಡುತ್ತಾರೆ: ನಾನು ಹಝ್ರ‌ತ್ ಅಲಿಯ ಬಳಿಯಿದ್ದೆ. ಹಝ್ರ‌ತ್ ಅಲಿಗೆ ಸವಾರಿ ಮಾಡಲು ಒಂದು ಸವಾರಿ ಮೃಗವನ್ನು ತರಲಾಯಿತು. ಅವರು ಅದರ ರಕಾಬಿನಲ್ಲಿ, ಕಾಲೂರೆಯಲ್ಲಿ ಪಾದಗಳನ್ನು ಇಟ್ಟಾಗ, ಮೂರು ಬಾರಿ ಬಿಸ್ಮಿಲ್ಲಾಹ್ ಹೇಳಿದರು. ಅದರ ಬೆನ್ನಲ್ಲಿ ನೇರವಾಗಿ ಕುಳಿತುಕೊಂಡಾಗ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಅನಂತರ **ಸುಬ್ಹಾನಲ್ಲಧೀ ಸಖ್ಖರಲನಾ ಹಾಧಾ ವಮಾ ಕುನ್ನಾ ಲಹೂ ಮುಖ್ರನೀನ್. ವಅನ ಇಲಾ ರಬ್ಬಿನಲ್ ಮುಂಖಲಿಬೂನ್**. ಎಂದರೆ, ಇದನ್ನು ನಮಗೆ ವಿಧೇಯವನ್ನಾಗಿ ಮಾಡಿದ್ದ ಅಲ್ಲಾಹನು ಪರಿಶುದ್ಧನು. ನಮಗೆ ಅದರ ಸಾಮರ್ಥ್ಯವಿಲ್ಲ. ನಿಶ್ಚಯವಾಗಿಯೂ ನಾವು ನಮ್ಮ ಪ್ರಭುವಿನ ಕಡೆಗೆ ಮರಳಿಹೋಗುವವರಾಗಿದ್ದೇವೆ. ಅನಂತರ ಅವರು ಮೂರು ಬಾರಿ

ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಮತ್ತು ಮೂರು ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅನಂತರ ಅವರು ಈ ದುಆವನ್ನು ಓದಿದರು: **ಸುಬ್‌ಹಾನಕ ಇನ್ನೀ ಖದ್ ಝ್ಲಲಮ್‌ತು ನಫ್‌ಸೀ ಫಗ್‌ಫಿರ್‌ಲೀ ಫಇನ್ನಹೂ ಲಾ ಯಗ್‌ಫಿರುಧ್ದುನೂಬ ಇಲ್ಲಾ ಅಂತ**. ಎಂದರೆ ನೀನು ಪರಿಶುದ್ಧನು. ನಿಶ್ಚಯವಾಗಿಯೂ ನಾನು ನನ್ನ ಜೀವದ ಮೇಲೆ ದೌರ್ಜನ್ಯವನ್ನು ಮಾಡಿದ್ದೇನೆ. ಆದ್ದರಿಂದ ನೀನು ನನ್ನನ್ನು ಕ್ಷಮಿಸು. ಏಕೆಂದರೆ, ನೀನಲ್ಲದೆ ಪಾಪಗಳನ್ನು ಕ್ಷಮಿಸುವವನು ಯಾರೂ ಇಲ್ಲ. ಅನಂತರ ಅವರು ಮುಗುಳ್ನಕ್ಕರು. ವರದಿಗಾರ ಹೇಳುತ್ತಾರೆ: ನಾನು ಕೇಳಿದೆ: ಯಾ ಅಮೀರಲ್ ಮೂಮಿನೀನ್, ನೀವು ಏಕೆ ಮುಗುಳ್ನಕ್ಕಿದ್ದೀರಿ. ಹಝ್ರತ್ ಅಲಿ(ರ) ಹೇಳಿದರು: ನಾನೀಗ ಮುಗುಳ್ನಕ್ಕ ರೀತಿಯಲ್ಲೇ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕಿದ್ದನ್ನು ನಾನು ಕಂಡಿದ್ದೇನೆ. ಯಾ ರಸೂಲುಲ್ಲಾಹ್, ನೀವೇಕೆ ಮುಗುಳ್ನಕ್ಕಿದ್ದೀರಿ ಎಂದು ನಾನು ಸಹ ಕೇಳಿದ್ದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೇ ನನ್ನ ಪ್ರಭೂ, ನನ್ನ ಪಾಪಗಳನ್ನು ಕ್ಷಮಿಸು ಎಂದು ದಾಸನು ಹೇಳುವಾಗ ಅಲ್ಲಾಹನು ಅವನ ದಾಸನ ಮೇಲೆ ತುಂಬಾ ಸಂತೋಷಗೊಳ್ಳುತ್ತಾನೆ. ಈ ಕಾರಣದಿಂದ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕಿದ್ದರು. (ಜಾಮಿಅತ್ತಿರ್‌ಮಿಝಿ, ಅಬ್ವಾಬುಬುದ್ದವಾತ್, ಹದೀಸ್–3446)

ಯಹ್ಯಾ ಬಿನ್ ಯಾಮಿರ್ ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಅಲಿ ಬಿನ್ ಅಬೂತಾಲಿಬ್ ಜನರನ್ನು ಸಂಬೋಧಿಸಿ ಮಾತನಾಡಿದರು. ಅಲ್ಲಾಹನನ್ನು ಸ್ತುತಿಸಿದ ಮತ್ತು ಅವನ ಪರಿಶುದ್ಧಿಯ ಬಗ್ಗೆ ಹೇಳಿದ ನಂತರ ಅವರು ಹೇಳಿದರು: ಹೇ ಜನರೇ, ಹಿಂದಿನ ಜನರು ಪಾಪಗಳನ್ನು ಮಾಡಿದ್ದ ಕಾರಣದಿಂದ ನಾಶವಾದರು. ಅವರ ಎಡೆಯಲ್ಲಿದ್ದ ಒಳ್ಳೆಯವರು ಮತ್ತು ಪಂಡಿತರು ಪಾಪಗಳನ್ನು ಮಾಡುವುದರಿಂದ ಜನರನ್ನು ತಡೆಯಲಿಲ್ಲ. ಅನಂತರ ಅವರು ಪಾಪಗಳಲ್ಲಿ ಮಿತಿಮೀರಿದ್ದಾಗ ಅವರನ್ನು ವಿವಿಧ ರೀತಿಯ ಶಿಕ್ಷೆಗಳು ಎರಗಿದುವು. ಆದ್ದರಿಂದ ನಿಮ್ಮ ಮೇಲೂ ಅಂತಹ ಶಿಕ್ಷೆ ಬರದಿರಲು ನೀವು ಒಳಿತುಗಳನ್ನು ಮಾಡಲು ಉಪದೇಶಿಸಿರಿ ಮತ್ತು ಕೆಡುಕುಗಳಿಂದ ಜನರನ್ನು ತಡೆಯಿರಿ. ನೆನಪಿಡಿರಿ, ಒಳಿತುಗಳನ್ನು ಮಾಡಲು ಆದೇಶಿಸುವುದರಿಂದ ಮತ್ತು ಕೆಡುಕುಗಳಿಂದ ಜನರನ್ನು ತಡೆಯುವುದರಿಂದ ನಿನ್ನ ಆಹಾರದಲ್ಲಿ ಯಾವುದೇ ಕೊರತೆ ಉಂಟಾಗುವುದಿಲ್ಲ. ನಿನ್ನ ಮರಣವನ್ನು ಸಹ ಅದು ಸಮೀಪ ಮಾಡುವುದಿಲ್ಲ. (ತಫ್ಸೀರುಲ್ ಖುರ್‌ಆನ್ ಲಿಇಬ್ನೆ ಅಸೀರ್, ಸಂಪುಟ–3, ಪುಟ–132, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1998)

ಹಝ್ರತ್ ಜಾಬಿರ್ ವರದಿ ಮಾಡುತ್ತಾರೆ: ಒಂದು ಬಾರಿ ನಾನು ಹಝ್ರತ್ ಪೈಗಂಬರರೊಂದಿಗೆ ಅನ್ಸಾರಿಯಾದ ಒಬ್ಬಳು ಸ್ತ್ರೀಯು ಮನೆಯಲ್ಲಿದ್ದೆವು. ಆ ಸ್ತ್ರೀ ನಮಗೆಲ್ಲರಿಗೂ ಆಹಾರ ತಯಾರು ಮಾಡಿದ್ದರು. ನಮ್ಮನ್ನು ಔತಣಕ್ಕಾಗಿ ಆಮಂತ್ರಿಸಿದ್ದರು. ಅಲ್ಲಿರುವಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ಈಗ ನಿಮ್ಮ ಬಳಿ ಸ್ವರ್ಗಕ್ಕೆ ಅರ್ಹರಾದ ಒಬ್ಬ ವ್ಯಕ್ತಿ ಬರುವರು. ಅನಂತರ ಹಝ್ರತ್ ಅಬೂಬಕರ್(ರ) ಪ್ರವೇಶಿಸಿದರು. ನಾವು ಅವರಿಗೆ ಶುಭಾಶಯಗಳನ್ನು ಕೋರಿದೆವು. ಅನಂತರ ಹಝ್ರತ್ ಪೈಗಂಬರ್(ಸ) ಪುನಃ ಹೇಳಿದರು: ಈಗ ನಿಮ್ಮ ಬಳಿ ಸ್ವರ್ಗಕ್ಕೆ ಅರ್ಹರಾದ ಒಬ್ಬ ವ್ಯಕ್ತಿ ಬರುವರು. ಅನಂತರ ಹಝ್ರತ್ ಉಮರ್(ರ) ಪ್ರವೇಶಿಸಿದರು. ನಾವು ಅವರಿಗೆ ಶುಭಾಶಯಗಳನ್ನು ಕೋರಿದೆವು. ಅನಂತರ ಹಝ್ರತ್ ಪೈಗಂಬರ್(ಸ) ಪುನಃ ಹೇಳಿದರು: ಈಗ ನಿಮ್ಮ ಬಳಿ ಸ್ವರ್ಗಕ್ಕೆ ಅರ್ಹರಾದ ಒಬ್ಬ ವ್ಯಕ್ತಿ ಬರುವರು. ವರದಿಗಾರ ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಪೈಗಂಬರರ(ಸ) ತಲೆ ಒಂದು ಗಿಡಕ್ಕೆ ಮರೆಯಾಗಿ ಇದ್ದಿತ್ತು. ಅವರು ಹೀಗೆ ಹೇಳುತ್ತಿದ್ದರು. ಹೇ ಅಲ್ಲಾಹ್, ಈಗ ಬರುವ ವ್ಯಕ್ತಿ ಅಲಿ ಆಗಿರಲಿ. ಅನಂತರ ಹಝ್ರತ್ ಅಲಿ(ರ) ದಾಖಲಾದರು. ಆಗ ನಾವು ಅವರಿಗೆ ಶುಭಾಶಯಗಳನ್ನು ಕೋರಿದೆವು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–5, ಪುಟ–107, ಹದೀಸ್–14604, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವರ್ಗವುಮೂರು ಜನರನ್ನು ಬಯಸುತ್ತಿದೆ. ಅವರು ಹಝ್ರತ್ ಅಲಿ(ರ), ಅಮ್ಮಾರ್(ರ) ಮತ್ತು ಸಲ್ಮಾನ್(ರ) ಆಗಿರುವರು.
(ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಭಾಗ–3, ಪುಟ–348, ಹದೀಸ್–4724, ದಾರುಲ್ ಫೀಕರ್ ಬೈರೂತ್ 2002)

ಅಬೂ ಉಸ್ಮಾನ್ ನಹದೀ ವರದಿ ಮಾಡುತ್ತಾರೆ: ಹಝ್ರತ್ ಅಲಿ ಹೇಳಿದರು: ಒಂದು ಸಲ ಹಝ್ರತ್ ಪೈಗಂಬರ್(ಸ) ನನ್ನ ಕೈಯನ್ನು ಹಿಡಿದಿದ್ದರು. ನಾವು ಮದೀನದ ಒಂದು ಗಲ್ಲಿಯನ್ನು ದಾಟಿಕೊಂಡು ಒಂದು ತೋಟಕ್ಕೆ ಪ್ರವೇಶಿಸಿದೆವು. ಈ ತೋಟ ಎಷ್ಟು ಮನೋಹರವಾಗಿದೆ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಸ್ವರ್ಗದಲ್ಲಿ ಇದಕ್ಕಿಂತ ಸುಂದರವಾದ ತೋಟವಿದೆ. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಭಾಗ–3, ಪುಟ–348, ಹದೀಸ್–4730, ದಾರುಲ್ ಫೀಕರ್ ಬೈರೂತ್ 2002)

ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ವರದಿ ಮಾಡುತ್ತಾರೆ: ಹಝ್ರತ್ ಅಲಿಯೊಡನೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ಹೇ ಅಲಿ, ಅಲ್ಲಾಹನು ಇತರ ದಾಸರಿಗೆ ನೀಡದಂತಹ ಒಂದು ವೈಶಿಷ್ಟ್ಯವನ್ನು ಅವನು ನಿನಗೆ ನೀಡಿದ್ದಾನೆ. ಅದೇನೆಂದರೆ ಭೌತಿಕತೆಯೊಂದಿಗೆ ನಿನ್ನವಿರಕ್ತಿ. ಎಂದರೆ ಲೌಕಿಕತೆಯೊಂದಿಗೆ ನಿನಗೆ ಆಸಕ್ತಿ ಇಲ್ಲದಂತೆ ಮಾಡಿದ್ದಾನೆ. ನೀನು ಲೋಕದಿಂದ ಏನೂ ಪಡೆಯುವುದಿಲ್ಲ ಮತ್ತು ಲೋಕವೂ ನಿನ್ನಿಂದ ಏನೂ ಸ್ವೀಕರಿಸುವುದಿಲ್ಲ. ನಿನಗೆ ಲೌಕಿಕ ವಸ್ತುವಿನ ಯಾವುದೇ ಆಸೆಯಿಲ್ಲ. ಭೌತಿಕತೆಯೊಂದಿಗೆ ಸಂಬಂಧವಿರಿಸಿರುವ ಜನರು ಸಹ ನಿನ್ನೊಂದಿಗೆ ಸಂಬಂಧವಿರಿಸಲು ಇಚ್ಛಿಸುವರಲ್ಲ. ಅದರೊಂದಿಗೆ ನಿನಗೆ ಬಡವರೊಂದಿಗೆ ಪ್ರೀತಿಯನ್ನು ಅಲ್ಲಾಹನು ಉಂಟುಮಾಡಿದ್ದಾನೆ. ಅವರು ನಿನ್ನನ್ನು ಇಮಾಂ ಮಾಡಿಕೊಂಡು ಸಂತೋಷಗೊಳ್ಳುತ್ತಾರೆ. ನೀನು ಅವರ ನೇತಾರನೆಂಬ ನೆಲೆಯಲ್ಲಿ ನೀನು ಸಹ ಖುಶಿಪಡುತ್ತಿಯಾ. ಆದ್ದರಿಂದ ನಿನ್ನನ್ನು ಪ್ರೀತಿಸುವವರಿಗೆ ಮತ್ತು ನಿನ್ನ ಬಗ್ಗೆ ಸತ್ಯ ಹೇಳಿದವರಿಗೆ ಸುವಾರ್ತೆ. ನಿನ್ನೊಡನೆ ಹಗೆಯಿರಿಸುವ ಮತ್ತು ನಿನ್ನ ಬಗ್ಗೆ ಸುಳ್ಳು ಹೇಳುವವರ ಮೇಲೆ ನಾಶ. ನಿನ್ನನ್ನು ಪ್ರೀತಿಸುವವರು ಮತ್ತು ನಿನ್ನ ಬಗ್ಗೆ ಸತ್ಯ ಹೇಳುವವರು ಸ್ವರ್ಗದಲ್ಲಿ ನಿನ್ನ ಮನೆಯ ನೆರೆಕರೆಯವರಾಗಿರುವರು ಮತ್ತು ನಿನ್ನ ಮಹಲ್ಲಿನಲ್ಲಿ ನಿನ್ನ ಸಂಗಡಿಗರಾಗಿರುವರು. ನಿನ್ನನ್ನು ದ್ವೇಷಿಸುವವರನ್ನು ಮತ್ತು ನಿನ್ನ ಬಗ್ಗೆ ಸುಳ್ಳು ಹೇಳುವವರನ್ನು ಕಠಿಣವಾದ ಸುಳ್ಳುಗಾರರೊಂದಿಗೆ ಖಿಯಾಮತ್ ದಿನದಂದು ನಿಲ್ಲಿಸುವ ಜವಾಬ್ದಾರಿಯನ್ನು ಅಲ್ಲಾಹನು ಹೊತ್ತಿದ್ದಾನೆ.
(ಅಸದುಲ್‌ಗಾಬ ಲಿಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–346–37, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವರ್ಗದಲ್ಲಿ ನಾನಿರುವ ಅಂತಸ್ತಿನಲ್ಲಿ ಅಲಿ ಮತ್ತು ಫಾತಿಮಾ ಇರುವರು. (ಬರಕಾತೆ ಖಿಲಾಫತ್, ಅನ್ವಾರುಲ್ ಉಲೂಮ್, ಸಂಪುಟ–2, ಪುಟ–254)

ಅಶ್ರ ಮುಬಶ್ಶಿರ, ಎಂದರೆ ಸ್ವರ್ಗಕ್ಕೆ ಹೋಗುವವರು ಎಂದು ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದ ಹತ್ತು ವ್ಯಕ್ತಿಗಳಲ್ಲಿ ಹಝ್ರತ್ ಅಲಿ(ರ) ಸೇರಿದ್ದರು. ಹಝ್ರತ್ ಸಈದ್ ಬಿನ್ ಝ್ಯೆದ್ ವರದಿ ಮಾಡುತ್ತಾರೆ: ಸ್ವರ್ಗಕ್ಕೆ ಅರ್ಹರಾದ ಒಂಬತ್ತು ಜನರ ಬಗ್ಗೆ ನಾನು ಸಾಕ್ಷ್ಯವಹಿಸುತ್ತೇನೆ. ನಾನು ಹತ್ತನೇ ವ್ಯಕ್ತಿಯ ಬಗ್ಗೆ ಸಹ ಹೇಳಿದ್ದರೆ ಅದರಲ್ಲಿ ತಪ್ಪೇನಿಲ್ಲ. ಅದರ ಬಗ್ಗೆ ಜನರು ಕೇಳಿದರು. ಅವರು ಹೇಳಿದರು: ನಾವು ಹಝ್ರತ್ ಪೈಗಂಬರರೊಂದಿಗೆ ಹಿರಾ ಪರ್ವತದಲ್ಲಿದ್ದೆವು. ಆಗ ಅದು ಕಂಪಿಸಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲುಗಾಡಬೇಡ ಹಿರಾ, ಖಂಡಿತವಾಗಿಯೂ ನಿನ್ನ ಮೇಲೆ ಒಬ್ಬ ನಬಿ, ಸಿದ್ದೀಖ್ ಮತ್ತು ಶಹೀದ್ ಇರುವರು. ಸ್ವರ್ಗಕ್ಕೆ ಅರ್ಹರಾದ ಜನರು ಯಾರಾಗಿದ್ದರು ಎಂದು ಒಬ್ಬರು ಕೇಳಿದರು. ಹಝ್ರತ್ ಸಈದ್ ಬಿನ್ ಝ್ಯೆದ್ ಹೇಳಿದರು: ಸ್ವತಃ ಹಝ್ರತ್ ಪೈಗಂಬರ್(ಸ), ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್‌ಹ, ಝುಬೇರ್, ಸಅದ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್. ಹತ್ತನೇ ವ್ಯಕ್ತಿ ಯಾರೆಂದು ಕೇಳಲಾಯಿತು. ಅದು ನಾನಾಗಿದ್ದೇನೆಂದು ಅವರು ಹೇಳಿದರು. (ಸನನ್ ಅತ್ತಿರ್‌ಮಿಝಿ, ಅಬ್ವಾಬು;ಲ್ ಮನಾಖಿಬ್, ಹದೀಸ್–3757)

ಹಝ್ರತ್ ಮಸೀಹ್ ಮೌಊದ್(ಅ) ಒಂದು ಘಟನೆಯನ್ನು ವಿವರಿಸಿದ್ದರು. ತಮ್ಮ ಆತ್ಮದ ಮೇಲೆ ನಿಯಂತ್ರಣ ಮತ್ತು ಅಹಂಕಾರವನ್ನು ದೂರಮಾಡಿಸುವುದಕ್ಕೆ ಸಂಬಂಧಿಸಿ ಹೇಳಿದ್ದರು. ಇದನ್ನು ನಾನು ಮೊದಲು ಸಹ ವಿವರಿಸಿದ್ದೇನೆ. ಇಲ್ಲಿ ಪುನಃ ವಿವರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಲಿ ಕರ್ರಮುಲ್ಲಾಹ್ ವಜ್‌ಹಹೂ ಒಂದು ಶತ್ರುವಿನೊಡನೆ ಹೋರಾಡುತ್ತಿದ್ದರು. ಅಲ್ಲಾಹನ ಸಂಪ್ರೀತಿಗಾಗಿ ಮಾತ್ರ ಯುದ್ಧ ಮಾಡುತ್ತಿದ್ದರು. ಕೊನೆಗೆ ಹಝ್ರತ್ ಅಲಿ(ರ) ಅವರನ್ನು ಕೆಳಗೆ ಬೀಳಿಸಿದರು. ಅವನ ಎದೆಯ ಮೇಲೇರಿ ಕುಳಿತುಕೊಂಡರು. ಅವನು ತಕ್ಷಣವೇ ಹಝ್ರತ್ ಅಲಿಯ ಮುಖಕ್ಕೆ ಉಗುಳಿದನು. ಹಝ್ರತ್ ಅಲಿ(ರ) ಬೇಗನೇ ಅವನ ಎದೆಯ ಮೇಲಿಂದ ಕೆಳಗೆ ಇಳಿದರು ಮತ್ತು ಅವನನ್ನು ಬಿಟ್ಟರು. ಅವರು ಹೇಳಿದರು: ಇಲ್ಲಿಯ ವರೆಗೆ ನಾನು ಅಲ್ಲಾಹನಗಾಗಿ ನಿನ್ನೊಡನೆ ಹೋರಾಡುತ್ತಿದ್ದೆ. ಆದರೆ ಈಗ ನೀನು ನನ್ನ ಮುಖಕ್ಕೆ ಉಗುಳಿದಾಗ, ನನ್ನ ಹೋರಾಟದಲ್ಲಿ ನನ್ನ ಕೋಪವೂ ಸೇರಿಕೊಂಡಿದೆ. ಆದ್ದರಿಂದ ನನಗಾಗಿ ನಿನ್ನನ್ನು ಕೊಲ್ಲಲು ನಾನು ಬಯಸುವುದಿಲ್ಲ. ಹಝ್ರತ್ ತನ್ನ ಶತ್ರುವನ್ನು ಶತ್ರುವೆಂದು ಭಾವಿಸಿರಲಿಲ್ಲವೆಂದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂತಹ ಪ್ರಕೃತ ಮತ್ತು ಸ್ವಭಾವನ್ನು ನಿಮ್ಮೊಳಗೆ ಉಂಟುಮಾಡಬೇಕು. ತಮ್ಮ ಸ್ವಾರ್ಥ

ಲಾಲಸೆ ಮತ್ತು ಉದ್ದೇಶಕ್ಕಾಗಿ ಯಾರಿಗಾದರೂ ದುಃಖವನ್ನು ನೀಡುವುದಾದರೆ ಮತ್ತು ಶತ್ರುತ್ವದ ಪರಂಪರೆಯನ್ನು ವಿಸ್ತೀರ್ಣಗೊಳಿಸುವುದಾದರೆ ಅದಕ್ಕಿಂತ ಹೆಚ್ಚು ಅಲ್ಲಾಹನ ಅಸಂತುಷ್ಟಿಗೆ ಕಾರಣವಾಗುವಂತಹ ಸಂಗತಿ ಬೇರೇನಿದೆ. (ಮಲ್‌ಫೂಝಾತ್ ಸಂಪುಟ–8, ಪುಟ–105)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಇದನ್ನು ವಿಶದವಾಗಿ ಹೀಗೆ ವಿವರಿಸುತ್ತಾರೆ: ಸ್ವಾರ್ಥಪರವಾದ ಆವೇಶ ಮತ್ತು ಅಲ್ಲಾಹನಿಗಾಗಿರುವ ಆವೇಶದ ನಡುವೆ ಇರುವ ವ್ಯತ್ಯಾಸವನ್ನು ಅರಿಯಲು ಹಝ್ರತ್ ಅಲಿಯ ಈ ಘಟನೆಯಿಂದ ಪಾಠ ಕಲಿಯಬೇಕು. ಒಬ್ಬ ಸತ್ಯನಿಷೇಧಿಯಾದ ಪಹಿಲ್ವಾನಿನೊಡನೆ ಹಝ್ರತ್ ಅಲಿ(ರ) ಹೋರಾಡುತ್ತಿದ್ದರು. ಪದೇ ಪದೇ ಅವರನ್ನು ಹಿಡಿಯುತ್ತಿದ್ದರು. ಆದರೆ ಅವನು ಹಿಡಿತದಿಂದ ಹೊರಗೆ ಬರುತ್ತಿದ್ದನು. ಕೊನೆಗೆ ಅವನನ್ನು ಗಟ್ಟಿಯಾಗಿ ಹಿಡಿದು ಅವನ ಎದೆಯ ಮೇಲೆ ಏರಿದರು. ಅವನನ್ನು ಚೂರಿಯಿಂದ ಕೊಲ್ಲಲು ಹೋದಾಗ ಅವನು ಕೆಳಗಿನಿಂದ ಹಝ್ರತ್ ಅಲಿಯ ಮುಖಕ್ಕೆ ಉಗುಳಿದನು. ಹೀಗೆ ಮಾಡಿದಾಗ, ಹಝ್ರತ್ ಅಲಿ ಅವನ ಎದೆಯ ಮೇಲಿಂದ ಎದ್ದುನಿಂತು ಅವನನ್ನು ಬಿಟ್ಟರು. ಅದನ್ನು ನೋಡಿ ಅವನು ಅಚ್ಚರಿಗೊಂಡನು. ಅವನು ಹಝ್ರತ್ ಅಲಿಯೊಡನೆ ಕೇಳಿದನು: ನೀವು ನನ್ನನ್ನು ಇಷ್ಟು ಕಷ್ಟದಿಂದ ಹಿಡಿದಿದ್ದೀರಿ, ನಾನು ನಿಮ್ಮ ಕಠಿಣ ಶತ್ರುವಾಗಿದ್ದೇನೆ. ನಿಮ್ಮನ್ನು ಕೊಲ್ಲಲು ತಯಾರಾಗಿದ್ದೆ. ಹೀಗಿದ್ದರೂ ನೀವು ನನ್ನನ್ನು ಹಿಡಿದ ನಂತರ ಈಗ ಏಕೆ ಬಿಟ್ಟಿರಿ. ಹಝ್ರತ್ ಅಲಿ(ರ) ಅದಕ್ಕೆ ಹೀಗೆ ಉತ್ತರಿಸಿದರು: ಸಂಗತಿಯೇನೆಂದರೆ, ನನ್ನ ಮತ್ತು ನಿನ್ನ ನಡುವೆ ವೈಯಕ್ತಿಕವಾದ ಯಾವುದೇ ಶತ್ರುತ್ವವಿಲ್ಲ. ನೀನು ಇಸ್ಲಾಂ ಧರ್ಮವನ್ನು ವಿರೋಧಿಸುತ್ತಾ ಮುಸ್ಲಿಮರಿಗೆ ದುಃಖವನ್ನು ನೀಡುತ್ತಿದ್ದೆ. ಆದ್ದರಿಂದ ನೀನು ಕೊಲ್ಲಲ್ಪಡಲು ಅರ್ಹನಾಗಿದ್ದೆ. ನಾನು ನಿನ್ನನ್ನು ಧರ್ಮಕ್ಕಾಗಿ ನಿನ್ನನ್ನು ಹಿಡಿದಿದ್ದೆ. ಆದರೆ ನೀನು ನನ್ನ ಮುಖಕ್ಕೆ ಉಗುಳಿದಾಗ, ನನಗೆ ಕೋಪಬಂತು. ಈಗ ಸ್ವಂತ ವಿಷಯ ನಡುವೆ ಬಂದ ಕಾರಣ ಏನಾದರೂ ಮಾಡುವುದು ಸರಿಯಲ್ಲವೆಂದು ನಾನು ಭಾವಿಸಿದೆ. ನಮ್ಮ ಯಾವುದೇ ಕೆಲಸ ಸ್ವಂತ ಸ್ವಾರ್ಥಕ್ಕಾಗಿ ಆಗದಿರಲು ಮತ್ತು ಎಲ್ಲವೂ ಅಲ್ಲಾಹನಿಗಾಗಿ ಆಗಲಿಕ್ಕಾಗಿ ಹಾಗೆ ಮಾಡಿದೆ. ನನ್ನ ಸ್ಥಿತಿಯಲ್ಲಿ ಬದಲಾವಣೆಯಾಗುವಾಗ, ನನ್ನ ಕೋಪ ತಣ್ಣಗಾಗುವಾಗ, ನಿನ್ನೊಡನೆ ಪುನಃ ಹೋರಾಡುವೆನು. ಇದನ್ನು ಕೇಳಿದಾಗ ಆ ಸತ್ಯನಿಷೇಧಿಯ ಮೇಲೆ ಎಂತಹ ಪ್ರಭಾವ ಉಂಟಾಯಿತೆಂದರೆ, ಅವನ ಎಲ್ಲ ಸತ್ಯನಿಷೇಧವೂ ಅವನ ಹೃದಯದಿಂದ ಹೊರಟು ಹೋಯಿತು. ಯಾವ ಧರ್ಮದ ಅಧ್ಯಾಪನೆಗಳ ಕಾರಣದಿಂದ ಮನುಷ್ಯನು ಇಷ್ಟು ಪರಿಶುದ್ಧನಾಗುತ್ತಾನೋ ಇದಕ್ಕಿಂತ ಉತ್ತಮವಾದ ಬೇರೆ ಯಾವ ಧರ್ಮ ಲೋಕದಲ್ಲಿ ಇರಲು ಸಾಧ್ಯವೆಂದು ಅವನು ಯೋಚಿಸಿದನು. ಹೀಗೆ ಅವನು ತಕ್ಷಣವೇ ತೌಬ ಮಾಡಿಕೊಂಡು ಮುಸ್ಲಿಮನಾದನು.
(ಮಲ್‌ಫೂಝಾತ್, ಸಂಪುಟ–9, ಪುಟ–219)

ಒಟ್ಟಿನಲ್ಲಿ ಪರಿಣಾಮ ಬೀರುವಂತಹ ತಖ್ವಾವೇ ಯಥಾರ್ಥ ತಖ್ವಾ. ದೇವಭಕ್ತಿ.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಹಝ್ರತ್ ಅಲಿಯ ಈ ಯಹೂದಿಯೊಡನೆ ಮಾಡಿದ್ದ ಕಾದಾಟದ ಘಟನೆಯನ್ನು ಹೆಚ್ಚುಕಮ್ಮಿ ಹೀಗೆಯೇ ವಿವರಿಸಿದ್ದಾರೆ. ಅವರು ಹೇಳುತ್ತಾರೆ; ಹಝ್ರತ್ ಅಲಿ(ರ) ಒಂದು ಯುದ್ಧದಲ್ಲಿ ಭಾಗವಹಿಸಿದ್ದರು. ಬಹಳ ಕಡಿಮೆ ಜನರು ಎದುರಿಸಲು ಸಾಧ್ಯವಿದ್ದ ಒಬ್ಬ ದೊಡ್ಡ ಶತ್ರು ಅವರೊಡನೆ ಮುಖಾಮುಖಿಯಾದರು. ಹಲವು ಗಂಟೆಗಳ ತನಕ ಅವರ ಮತ್ತು ಆ ಯಹೂದಿ ಪಹಿಲ್ವಾನಿನ ಹೋರಾಟ ನಡೆಯುತ್ತಾ ಇತ್ತು. ಕೊನೆಗೆ ಹಲವು ಗಂಟೆಗಳ ಹೋರಾಟದ ನಂತರ ಅವರು ಆ ಯಹೂದಿಯನ್ನು ಕೆಳಗೆ ಬೀಳಿಸಿದರು. ಅವನ ಎದೆಯನ್ನೇರಿ ಕುಳಿತುಕೊಂಡರು. ಅವನ ಕುತ್ತಿಗೆಯನ್ನು ಚೂರಿಯಿಂದ ಕತ್ತರಿಸಲು ಉದ್ದೇಶಿಸಿದರು. ಅಷ್ಟರಲ್ಲಿ ಆ ಯಹೂದಿ ಅವರ ಮುಖಕ್ಕೆ ಉಗುಳಿದರು. ಅವರು ಬೇಗನೇ ಅವನನ್ನು ಬಿಟ್ಟುಕೊಂಡು ನಿಂತರು.ಆ ಯಹೂದಿ ತುಂಬಾ ಆಶ್ಚರ್ಯಗೊಂಡನು. ಅವನು ಹೇಳಿದನು: ಇದು ಎಂತಹ ಅಚ್ಚರಿಯ ಸಂಗತಿಯಾಗಿದೆ. ಹಲವು ಗಂಟೆಗಳ ಕುಸ್ತಿಯ ನಂತರ ನೀವು ನನ್ನನ್ನು ಬೀಳಿಸಿದ್ದೀರಿ. ಈಗ ಒಂದೇ ಕ್ಷಣದಲ್ಲಿ ನನ್ನನ್ನು ಬಿಟ್ಟು ಬೇರೆಯಾಗಿದ್ದೀರಿ. ಇದು ಎಂತಹ ಮುರ್ಖತನವಾಗಿದೆ. ಹಝ್ರತ್ ಅಲಿ(ರ) ಹೇಳಿದರು: ಇದು ನನ್ನ ಮುರ್ಖತನವಲ್ಲ. ನಿನ್ನನ್ನು ನಾನು ಕೆಳಗೆ ಬೀಳಿಸಿದಾಗ ನೀನು ನನ್ನ ಮುಖಕ್ಕೆ ಉಗುಳಿದೆ. ನೀನೇಕೆ ನನ್ನ ಮುಖಕ್ಕೆ ಉಗುಳಿದೆ ಎಂದು ಯೋಚಿಸಿ ಆ ಕ್ಷಣ ನನಗೆ ಕೋಪಬಂತು. ಆದರೆ ಇಷ್ಟರ ವರೆಗೆ ನಾನು ಅಲ್ಲಾಹನಿಗಾಗಿ ಹೋರಾಡುತ್ತಿದ್ದೆ. ಈಗ ನಾನು ಕುಸ್ತಿಯನ್ನು ಮುಂದುವರೆಸಿದರೆ ನಿನ್ನ ಮರಣ ನನ್ನ ಮನಸ್ಸಿನ ಕೋಪದ ಕಾರಣದಿಂದಲೂ ಆಗಬಹುದು, ಅಲ್ಲಾಹನ ಸಂಪ್ರೀತಿಗೆ ಆಗದೇ ಇರಬಹುದು ಎಂದು ನಾನು ಆಲೋಚಿಸಿದೆ. ಆದ್ದರಿಂದ ನಿನ್ನನ್ನು ಬಿಡುವುದು ಸರಿಯೆಂದು ನಾನು ಭಾವಿಸಿದೆ. ನನ್ನ ಕೋಪ ತಣ್ಣಗೆಗೊಂಡರೆ, ನಾನು ಅಲ್ಲಾಹನಿಗಾಗಿ ನಿನ್ನನ್ನು ಪುನಃ ಬೀಳಿಸುವೆನು.

ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು. **ಇನ್ಶಾ ಅಲ್ಲಾಹ್.**

ಈಗ ನಾನು ಮತ್ತೊಂದು ಸಂಗತಿಯನ್ನು ಸಹ ಹೇಳಬಯಸುತ್ತೇನೆ. ಇಂದು ಹೊಸವರ್ಷದ ಮೊದಲ ದಿನ ಮತ್ತು ಮೊದಲ ಜುಮಾಆಗಿದೆ. ಈ ವರ್ಷವು ಜಮಾಅತಿಗೆ ಮತ್ತು ಲೋಕದ ಜನರಿಗೆ ಅನುಗ್ರಹೀತವಾಗಲಿ. ನಾವು ಸಹ ನಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಾ ಮೊದಲಿಗಿಂತ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗುವವರೂ ತಮ್ಮ ಆರಾಧನೆಯ ಮಟ್ಟವನ್ನು ವರ್ಧಿಸುವವರೂ ಆಗಲಿ. ಲೋಕದ ಜನರು ಸಹ ತಮ್ಮ ಹುಟ್ಟಿನ ಉದ್ದೇಶವನ್ನು ಅರಿತು ಕೊಂಡು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವವರಾಗಲಿ. ಪರಸ್ಪರ ಹಕ್ಕುಗಳನ್ನು ಅಪಹರಿಸುವುದಕ್ಕೆ ಬದಲಿಗೆ ಅಲ್ಲಾಹನ ಆದೇಶಗಳ ಪ್ರಕಾರ ನಡೆಯುತ್ತಾ ಪರಸ್ಪರ ಹಕ್ಕುಗಳನ್ನು ನೆರವೇರಿಸುವವರಾಗಲಿ. ಇಲ್ಲದಿದ್ದರೆ, ಅಲ್ಲಾಹನು ತನ್ನದೇ ರೀತಿಯಲ್ಲಿ ಲೋಕದ ಜನರನ್ನು ಅವರ ಕರ್ತವ್ಯಗಳ ಕಡೆಗೆ ತಿರುಗುವಂತೆ ಮಾಡುವನು. ನಾವು ಮತ್ತು ಲೋಕದ ಎಲ್ಲರೂ ಈ ಮುಖ್ಯವಾದ ಅಂಶವನ್ನು ಅರಿತು ಕೊಂಡು ತಮ್ಮ ಇಹಪರ ಜೀವಿತವನ್ನು ಸುಂದರಗೊಳಿಸಿದರೆ ಎಷ್ಟು ಚೆನ್ನಾಗಿತ್ತು.

ಕಳೆದ ಒಂದು ವರ್ಷದಿಂದ ನಾವು ಅತ್ಯಂತ ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ಎದುರಿಸುತ್ತಿದ್ದೇವೆ. ಲೋಕದ ಯಾವುದೇ ದೇಶ ಈ ಮಹಾಮಾರಿಯಿಂದ ಮುಕ್ತವಲ್ಲ. ಕೆಲವು ದೇಶಗಳಲ್ಲಿ ಕಡಿಮೆ ಮತ್ತು ಕೆಲವು ದೇಶಗಳಲ್ಲಿ ಹೆಚ್ಚಾಗಿ ಹರಡಿದೆ. ತಮ್ಮ ಹಕ್ಕುಗಳ ಮತ್ತು ಕರ್ತವ್ಯಗಳ ಕಡೆಗೆ ಶ್ರದ್ಧೆ ವಹಿಸುವಂತಾಗಲು ಈ ಮಹಾಮಾರಿ ಅಲ್ಲಾಹನ ಕಡೆಯಿಂದ ಆಗಿರಬಹುದೇ ಎಂಬುದರ ಬಗ್ಗೆ ಗಮನಹರಿಸಲು ಲೋಕದ ಹೆಚ್ಚಿನವರು ಬಯಸುತ್ತಿಲ್ಲ. ನಮ್ಮನ್ನು ಎಚ್ಚರಗೊಳಿಸಲು, ನಮ್ಮೊಡನೆ ಹೇಳಲು ಮತ್ತು ನಮ್ಮ ಗಮನ ಹರಿಸಲಿಕ್ಕಾಗಿ ಆಗಿರಬಹುದೇ ಎಂಬ ರೀತಿಯಲ್ಲಿ ಯೋಚಿಸಲು ಬಯಸುವುದಿಲ್ಲ. ಇದರ ಕಡೆಗೆ ಯಾರ ಆಲೋಚನೆಯೂ ಇಲ್ಲ.

ಇದರ ಕಡೆಗೆ ಗಮನ ಸೆಳೆಯಲಿಕ್ಕಾಗಿ ನಾನು ಕೆಲವು ತಿಂಗಳಹಿಂದೆ ಹಲವಾರು ದೇಶಗಳ ಪ್ರಧಾನಿಗಳಿಗೆ ಪತ್ರಗಳನ್ನು ಬರೆದಿದ್ದೆ ಮತ್ತು ಕೋವಿಡ್‌ಗೆ ಸಂಬಂಧಿಸಿ ಮನವರಿಕೆ ಮಾಡಿಸಲು ಪ್ರಯತ್ನಿಸಿದ್ದೆ. ತಮ್ಮ ಹಕ್ಕುಗಳನ್ನೂ ಕರ್ತವ್ಯಗಳನ್ನೂ ಮರೆತು ಬಿಟ್ಟು ಅವುಗಳನ್ನು ಈಡೇರಿಸದೇ ಇರುವ ಕಾರಣದಿಂದ ಹಾಗೂ ದೌರ್ಜನ್ಯಗಳನ್ನು ಮಾಡುವುದರಿಂದ ಈ ಆಪತ್ತುಗಳು ಅಲ್ಲಾಹನ ಕಡೆಯಿಂದ ಬರುತ್ತವೆ. ಆದ್ದರಿಂದ ಗಮನವಹಿಸಿರಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳ ಮೂಲಕ ನಾನು ಗಮನಸೆಳೆದಿದ್ದೆ. ಕೆಲವು ಪ್ರಧಾನಿಗಳು ಪತ್ರಗಳಿಗೆ ಉತ್ತರ ಸಹ ಕೊಟ್ಟಿದ್ದರು. ಆದರೆ ಅವರದ್ದು ಭೌತಿಕವಾದ ರೀತಿಯ ಉತ್ತರಗಳಾಗಿದ್ದುವು. ನಾವು ಸಹ ಅದನ್ನೇ ಬಯಸುತ್ತಿದ್ದೇವೆ ಎಂಬ ರೀತಿಯಲ್ಲಿ ಲೌಕಿಕ ದೃಷ್ಟಿಯ ಮಾತುಗಳಾಗಿದ್ದುವು. ಧಾರ್ಮಿಕವಾದ ಸಂಗತಿಗಳೇನೂ ಇರಲಿಲ್ಲ. ಆ ಪತ್ರದಲ್ಲಿ ನಾನು ದೇವನಕುರಿತು ವಿಶದವಾಗಿ ವಿವರಿಸಿದ್ದ ಭಾಗದಕುರಿತು ಹೀಗೆ ಆಗಬೇಕು ಎಂಬ ರೀತಿಯಲ್ಲಿ ಯಾವುದೇ ಪ್ರತಿಕರಣೆ ಅವರ ಕಡೆಯಿಂದ ಉಂಟಾಗಲಿಲ್ಲ. ಈ ಜನರು ತಮ್ಮ ಸ್ಥಿತಿಗತಿಗಳನ್ನು ಬದಲಿಸಲು ಯಾವುದೇ ಹೆಜ್ಜೆಯನ್ನು ಹಾಕಲು ಬಯಸುವುದಿಲ್ಲವೆಂದು ಮಾತ್ರವಲ್ಲ, ಈ ಮಹಾಮಾರಿಯ ನಂತರದ ಅಪಾಯಕಾರಿ ದುಷ್ಪರಿಣಾಮಗಳ ಕುರಿತು ಗೊತ್ತಿದ್ದೂ ಸಮುದಾಯದ ಹಿತವನ್ನು ಬಯಸುತ್ತಾ ಮೂಲಭೂತ ಉದ್ದೇಶದ ಕಡೆಗೆ ಜನಸಾಮಾನ್ಯರ ಗಮನಸೆಳೆಯಲು ಕೂಡ ಇಚ್ಛಿಸುವುದಿಲ್ಲ. ಲೋಕದ ಪ್ರತಿಯೊಬ್ಬ ಲೀಡರಿಗೆ, ಪ್ರತಿಯೊಬ್ಬ ಬುದ್ಧಿವಂತನಿಗೆ, ಪ್ರತಿಯೊಬ್ಬ ವಿಶ್ಲೇಷಕನಿಗೆ ಇದರ ಬಗ್ಗೆ ಗೊತ್ತಿದ್ದೂ ಯಥಾರ್ಥ ಪರಿಹಾರದ ಕಡೆಗೆ ಗಮನವಿಲ್ಲ. ಕೇವಲ ಲೌಕಿಕವಾದ ಪ್ರಯತ್ನಗಳ ಕಡೆಗೆ ಶ್ರದ್ಧೆವಹಿಸುತ್ತಾರೆ.

ಈ ರೋಗದಿಂದ ಆರ್ಥಿಕ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿ ದುರ್ಬಲಗೊಳ್ಳುತ್ತಿದ್ದಾನೆ ಎಂಬುದಲ್ಲದೆ, ದೊಡ್ಡದೊಡ್ಡ ಶ್ರೀಮಂತ ರಾಷ್ಟ್ರಗಳ ಆರ್ಥಿಕತೆಯ ಸೊಂಟಗಳು ಮುರಿಯುತ್ತಿವೆ. ಇಂತಹ ಪರಿಸ್ಥಿತಿ ಬರುವಾಗ, ಆರ್ಥಿಕ ಸ್ಥಿತಿ ಕೆಟ್ಟುಹೋಗುವಾಗ ಲೌಕಿಕರ ಬಳಿ ಇದಕ್ಕೆ ಇರುವಾಗ ಒಂದೇ ಒಂದು ಪರಿಹಾರವೇನೆಂದರೆ, ಇತರ ಸಣ್ಣ ದೇಶಗಳ ಸಂಪತ್ತುಗಳನ್ನು ವಶಪಡಿಸಿಕೊಳ್ಳುತ್ತಾರೆ. ಅವರನ್ನು ಹೇಗಾದರೂ ತಮ್ಮ ಬಲೆಯಲ್ಲಿ ಸಿಲುಕಿಸಿಕೊಂಡು ತಮ್ಮ ಜಾಲದಲ್ಲಿ ಹಾಕಿಕೊಂಡು ಸುಳ್ಳು ನೆಪಗಳನ್ನು ಮಾಡಿಕೊಂಡು ಅವರ ಸಂಪತ್ತುಗಳನ್ನು ವಶಪಡಿಸಿಕೊಳ್ಳುತ್ತಾರೆ. ಅದಕ್ಕಾಗಿ ಬ್ಲೋಕ್ ಮಾಡುವರು ಮತ್ತು ಈಗಲೇ ಮಾಡುತ್ತಿದ್ದಾರೆ. ಶೀತಲ ಸಮರ ಪುನಃ ಶುರುವಾಗುವುದು. ಒಂದು ರೀತಿಯಲ್ಲಿ ಕೋಲ್ಡ್ ವಾರ್ ಶುರುವಾಗಿದೆ ಎಂದು ಹೇಳಲಾಗುತ್ತಿದೆ. ಅಸ್ತ್ರಗಳ ಮೂಲಕ ಮಾಡಲಾಗುವ ಯುದ್ಧ ಸಹ ನಡೆಯುವ ದಿನಗಳು ದೂರವಲ್ಲ. ಅದುಅತ್ಯಂತ ಭಯಾನಕ ಯುದ್ಧವಾಗಿರುವುದು. ಹೀಗೆ ಈ ಜನರು ಮತ್ತೊಂದು ಆಳವಾದ ಹೊಂಡದಲ್ಲಿ

ಬೀಳುವರು. ಬಡರಾಷ್ಟ್ರಗಳು ಮೊದಲೇ ಜಜ್ಜಲ್ಪಟ್ಟಿವೆ. ಶ್ರೀಮಂತ ರಾಷ್ಟ್ರಗಳು ಸಹ ಮಸಯಲ್ಪಡುವುವು. ಭಯಾನಕವಾದ ರೀತಿಯಲ್ಲಿ ಕಿವುಚಲ್ಪಡುವುವು. ಆದ್ದರಿಂದ ಲೋಕವು ಈ ಸ್ಥಿತಿಗೆ ತಲುಪುವುದಕ್ಕೆ ಮುಂಚಿತವಾಗಿ ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುತ್ತಾ ಲೋಕವನ್ನು ಎಚ್ಚರಗೊಳಿಸಬೇಕು. ಒಟ್ಟಿನಲ್ಲಿ, ಜನರಿಗೆ ಮತ್ತು ಲೋಕಕ್ಕೆ ಮನವರಿಕೆ ಆಗುವ ರೀತಿಯಲ್ಲಿ ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುವಾಗಲೇ ಈ ವರ್ಷ ಅನುಗ್ರಹೀತವಾಗುವುದು. ಇದನ್ನೆಲ್ಲ ಮಾಡುವಂತಾಗಲು ನಾವು ನಮ್ಮ ಸ್ಥಿತಿಗಳನ್ನು ವಿಶ್ಲೇಷಿಸಬೇಕೆಂಬುದು ಸ್ಪಷ್ಟ. ನಾವು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದರೊಂದಿಗೆ ಅವನ ದಾಸರ ಹಕ್ಕುಗಳನ್ನು ಸಹ ಅಲ್ಲಾಹನ ಸಲುವಾಗಿ ಈಡೇರಿಸುವವರಾಗಿದ್ದೇವೆಯೇ? ಕಾಲಘಟ್ಟದ ಇಮಾಂ ಮತ್ತು ವಾಗ್ದತ್ತ ಮಹ್‌ದೀ ಮತ್ತು ಮಸೀಹರನ್ನು ನಂಬಿಕೊಂಡಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಸ್ಥಿತಿ ಹಾಗೆ ಆಗಿದೆಯೇ? ಅಥವಾ ಈಗಲೂ ನಾವು ನಮ್ಮ ಸುಧಾರಣೆ ಮಾಡಬೇಕಾದ ಮತ್ತು ಪರಸ್ಪರ ಪ್ರೀತಿ ಪ್ರೇಮದ ಭಾವನೆಯನ್ನು ಅಸಾಧಾರಣವಾದ ಮಟ್ಟಕ್ಕೆ ಏರಿಸುವ ಆವಶ್ಯಕತೆ ಇದೆಯೇ? ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕು. ಅವನಿಗೆ ಬಹಳ ಹಿರಿದಾದ ಕೆಲಸವನ್ನು ಒಪ್ಪಿಸಲಾಗಿದೆ ಎಂದು ಅರಿಯಬೇಕು. ಅದನ್ನು ಪೂರ್ತಿ ಮಾಡಲು ಮೊದಲು ತಮ್ಮೊಳಗೆ, ಎಂದರೆ ಅಹ್ಮದೀ ಸಮಾಜದಲ್ಲಿ ಪ್ರೀತಿ–ಪ್ರೇಮ ಮತ್ತು ಸಾಹೋದರ್ಯದ ವಾತಾವರಣವನ್ನು ಸೃಷ್ಟಿಸಬೇಕು. ಅನಂತರ ಲೋಕವನ್ನು ಹಝ್ರತ್ ಪೈಗಂಬರ್(ಸ) ಎತ್ತಿ ಹಿಡಿದ ಅಲ್ಲಾಹನ ಏಕದೇವ ವಿಶ್ವಾಸದ ಬಾವುಟದ ಕೆಳಗೆ ತನ್ನಿರಿ. ಆಗಲೇ ನಾವು ನಮ್ಮ ಬೈಅತಿನ ಉದ್ದೇಶವನ್ನು ಸಾಧಿಸುವವರಾಗುವೆವು. ನಾವು ನಮ್ಮ ಬೈಅತಿನ ಹಕ್ಕುಗಳನ್ನು ಈಡೇರಿಸುವವರಾಗುವೆವು. ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವೆವು. ಆಗಲೇ ನಾವು ಹೊಸವರ್ಷದ ಶುಭಾಶಯಗಳನ್ನು ಅರ್ಪಿಸಲು ಮತ್ತು ಪಡೆಯಲು ನಾವು ಅರ್ಹರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ. ಇದನ್ನು ಅರಿತುಕೊಂಡು, ಈ ವರ್ಷ ನಾನು ಲೋಕದಲ್ಲಿ ಒಂದು ವಿಪ್ಲವವನ್ನು ಒಂದು ಬದಲಾವಣೆಯನ್ನು ಉಂಟುಮಾಡಲು ನನ್ನ ಎಲ್ಲತರದ ಸಾಮರ್ಥ್ಯಗಳನ್ನು ಉಪಯೋಗಿಸುವೆನು ಎಂದು ಅಹ್ಮದಿಯಾದ ಪ್ರತಿಯೊಬ್ಬ ಸ್ತ್ರೀ–ಪುರುಷ, ಯುವಕ, ಸಣ್ಣವರು ದೊಡ್ಡವರು ಪ್ರತಿಜ್ಞೆ ಮಾಡಬೇಕು. ಅಲ್ಲಾಹನು ಹಾಗೆ ಮಾಡಲು ಪ್ರತಿಯೊಬ್ಬ ಅಹ್ಮದಿಗೆ ತೌಫೀಕ್ ನೀಡಲಿ.

ಪಾಕಿಸ್ತಾನದ ಅಹ್ಮದಿಯರಿಗಾಗಿ ಮತ್ತು ಅಲ್‌ಜೀರಿಯಾದ ಅಹ್ಮದಿಯರಿಗಾಗಿ ದುಆ ಮಾಡುತ್ತಿರಲು ಕೆಲವು ದಿನಗಳಿಂದ ಹೇಳುತ್ತಿದ್ದೇನೆ. ಅವರನ್ನು ನಿಮ್ಮ ದುಆಗಳಲ್ಲಿ ಸ್ಮರಿಸಿರಿ. ಪಾಕಿಸ್ತಾನದಲ್ಲಿ ಕೆಲವು ಜಾಗಗಳಲ್ಲಿ ಕೆಲವು ಮೌಲವಿಗಳು ಮತ್ತು ಸರ್ಕಾರಿ ಅಧಿಕಾರಿಗಳು ದೌರ್ಜನ್ಯಗಳನ್ನು ಶುರು ಮಾಡಿರುವರು. ಸುಧಾರಣೆಗೊಳಿಸಲು ಸಾಧ್ಯವಿಲ್ಲದ ಇಂತಹ ಜನರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ. ಯಾರ ಸುಧಾರಣೆ ಯಾಗುವುದು ಮತ್ತು ಯಾರದ್ದು ಆಗಲು ಸಾಧ್ಯವಿಲ್ಲವೆಂದು ಅಲ್ಲಾಹನಿಗೆ ಗೊತ್ತಿದೆ. ಯಾರು ಸುಧಾರಣೆ ಯಾಗಲಿಕ್ಕಿಲ್ಲವೋ ಅವರನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ. ಪ್ರವಾದಿತ್ವದ ನಿಂದನೆಯ ಕಾನೂನಿನ ಮೂಲಕ ಈ ಜನರು ಅಹ್ಮದಿಯರ ಮೇಲೆ ದೌರ್ಜನ್ಯ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅಹ್ಮದಿಯರು ತಮ್ಮ ತರಬೇತಿಗಾಗಿ ಅವಲಂಬಿಸಿರುವ ಕೆಲವು ಮಾಧ್ಯಮಗಳಲ್ಲಿ ಮತ್ತು ಮಾರ್ಗಗಳಲ್ಲಿ ಎಲ್ಲದರ ಮೇಲೆ ನಿರ್ಬಂಧವೇರಲು ಪ್ರಯತ್ನಿಸುತ್ತಿದ್ದಾರೆ. ಅವರಿಂದ ಅದನ್ನು ಅಲ್ಲಾಹನು ಬೇಗನೇ ದೂರಮಾಡಲಿ. ಅಲ್ಲಾಹನು ನಮ್ಮನ್ನು ಅವರಿಂದ ವಿಮುಕ್ತಗೊಳಿಸಲಿ. ಯಥಾರ್ಥದಲ್ಲಿ ಇವರು ರಹ್ಮತುಲ್ಲಿಲ್‌ಆಲಮೀರಾದ ಪೈಗಂಬರರ(ಸ) ಅಪಕೀರ್ತಿ ಮಾಡುತ್ತಿರುವ ಜನರಾಗಿರುವರು. ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಗೌರವವನ್ನು ಕಾಪಾಡಲು ಅಹ್ಮದಿಯರು ತಮ್ಮ ಜೀವಗಳನ್ನು ತ್ಯಾಗ ಮಾಡುವವರಾಗಿದ್ದೇವೆ. ಇಂದು ಲೋಕವನ್ನು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜದ ಅಡಿಯಲ್ಲಿ ತರಲು ಅತ್ಯಂತ ಹೆಚ್ಚಾಗಿ, ಮಾತ್ರವಲ್ಲ ಯಥಾರ್ಥ ರೀತಿಯಲ್ಲಿ ಕೆಲಸ ಮಾಡುವವರು ಅಹ್ಮದಿಯರಾಗಿರುವರು. ಬದಲಿಗೆ, ಯಾರಾದರೂ ಈ ನಿಟ್ಟಿನಲ್ಲಿ ಕೆಲಸಮಾಡುತ್ತಿದ್ದರೆ, ಅದು ಕೇವಲ ಅಹ್ಮದಿಯರು ಎಂದು ಹೇಳಬೇಕು.

ಒಟ್ಟಿನಲ್ಲಿ, ಈ ಲೋಕ ಮತ್ತು ಲೋಕದ ಸರ್ಕಾರಗಳು ಸಂಪತ್ತಿನ ಆಧಾರದಲ್ಲಿ ನಮ್ಮ ಮೇಲೆ ದೌರ್ಜನ್ಯಗಳನ್ನು ಮಾಡಬಹುದಾಗಿದೆ. ಆದರೆ ನೆನಪಿಡಿರಿ. ನಾವು ಅತ್ಯಂತ ಉತ್ತಮನಾದ ಯಜಮಾನ ಮತ್ತು ಅತ್ಯಂತ ಉತ್ತಮವಾದ ಸಹಾಯಕನಾದ ಅಲ್ಲಾಹನನ್ನು ನಂಬುವವರಾಗಿರುವರು. ಆ ಉತ್ತಮ ಯಜಮಾನ ಮತ್ತು ಸಹಾಯಕನಾದ ಅಲ್ಲಾಹನ ಸಹಾಯ ನಿಶ್ಚಯವಾಗಿಯೂ ಬರುವುದು. ಖಂಡಿತ ಬರುವುದು. ಆಗ ಈ ಲೌಕಿಕರ ಹಾಗೂ ಶಕ್ತಿ ಮತ್ತು ಸಂಪತ್ತಿನ ಅಹಂಕಾರದಲ್ಲಿರುವವರ ಧೂಳು ಸಹ ಕಾಣಲು ಸಿಗಲಿಕ್ಕಿಲ್ಲ. ಆದ್ದರಿಂದ ನಮ್ಮ ಕೆಲಸವೇನೆಂದರೆ, ನಾವು ನಮ್ಮ ಆರಾಧನೆಗಳನ್ನು ಇನ್ನೂ ಹೆಚ್ಚು ಸುಂದರಗೊಳಿಸಬೇಕು. ಹೀಗೆ ಮಾಡಿದರೆ ಮಾತ್ರ ನಾವು ವಿಜಯಿಗಳಾಗುವೆವು.

ಅಲ್‌ಜೀರಿಯಾದ ಬಗ್ಗೆ ಅಲ್ಲಿಯ ಎಲ್ಲರನ್ನು ಬಿಡುಗಡೆಗೊಳಿಸಲಾಗಿದೆ ಎಂದು ನಾನು ಹೇಳಿದ್ದೆ. ಅಲ್ಲಿ ಒಂದು ಕೋರ್ಟ್ ಎಲ್ಲರನ್ನು ಬಿಡುಗಡೆಗೊಳಿಸಿತ್ತು. ಮತ್ತೊಂದು ನ್ಯಾಯಾಲಯ ಸಹ ಮಾಮೂಲಿ ದಂಡವನ್ನು ವಸೂಲು ಮಾಡಿಕೊಂಡು ಬಹುಪಾಲು ಜನರನ್ನು ಬಿಡುಗಡೆಗೊಳಿಸಿದೆ. ಆದರೆ ಈಗಲು ಅಲ್ಲಿ ಕೆಲವರು ಸೆರೆಯಲ್ಲಿದ್ದಾರೆ. ಜೈಲಿನಲ್ಲಿದ್ದಾರೆ. ಅವರಿಗಾಗಿಯೂ ದುಆ ಮಾಡಿರಿ. ಅವರು ಸಹ ಬೇಗನೇ ಬಿಡುಗಡೆಗೊಳ್ಳಲಿ. ಪಾಕಿಸ್ತಾನದಲ್ಲಿ ಸೆರೆಯಾಗಿ ಇರುವವರಿಗಾಗಿ ಸಹ ದುಆ ಮಾಡಿರಿ. ನಮ್ಮ ಯಥಾರ್ಥ ಸಂತೋಷಗಳು ಅವು ಹೊಸವರ್ಷವಾಗಿರಲಿ, ಈದ್ ಆಗಿರಲಿ, ನಾವು ಲೋಕದ ಎಲ್ಲ ಕಡೆ, ಹಝ್ರತ್ ಪೈಗಂಬರ್(ಸ) ತಂದ ಅಲ್ಲಾಹನ ಏಕದೇವವಿಶ್ವಾಸದ ಧ್ವಜವನ್ನು ಹಾರಿಸುವಾಗ ಉಂಟಾಗುವುದು. ಮನುಷ್ಯರು ಮನುಷ್ಯತ್ವದ ಮೌಲ್ಯಗಳನ್ನು ಮನವರಿಕೆ ಮಾಡುವಾಗ ಮತ್ತು ಪರಸ್ಪರದ ಹಗೆಗಳು ಪ್ರೀತಿ–ಪ್ರೇಮವಾಗಿ ಬದಲಾಗುವಾಗ ಮಾತ್ರ ನಾವು ಸಂತೋಷಗೊಳ್ಳುವವರಾಗುವೆವು. ಅಲ್ಲಾಹನು ಈ ಸಂತೋಷದ ಸ್ಥಿತಿ ಸಹ ನಮಗೆ ಬೇಗನೇ ಒದಗಿಸಲಿ. ಆಗಮಿಸಿರುವ ವಾಗ್ದತ್ತ ಮಹ್‌ದೀ ಮತ್ತು ಮಸೀಹರನ್ನು ನಂಬುವಂತಾಗಲು ಮುಸ್ಲಿಮ್ ಸಮುದಾಯಕ್ಕೆ ಅಲ್ಲಾಹನು ಬುದ್ಧಿ ನೀಡಲಿ. ಅಲ್ಲಾಹನ ಮತ್ತು ಅವನ ದಾಸರ ಹಕ್ಕುಗಳನ್ನು ಪೂರೈಸುವ ಕಡೆಗೆ ಗಮನವಹಿಸುವಂತಾಗಲು ಅಲ್ಲಾಹನು ಲೋಕಕ್ಕೆ ಬುದ್ಧಿಕೊಡಲಿ. ಅಲ್ಲಾಹನು ಪ್ರತಿಯೊಂದು ದೇಶದ ಪ್ರತಿಯೊಬ್ಬ ಅಹ್ಮದಿಯನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ. ಪ್ರತಿಯೊಬ್ಬ ಅಹ್ಮದಿಗೆ, ಪ್ರತಿಯೊಬ್ಬ ಮನುಷ್ಯರಿಗೆ ಈ ವರ್ಷ ಕಾರುಣ್ಯಗಳನ್ನು ಮತ್ತು ಅನುಗ್ರಹಗಳನ್ನು ತರುವ ವರ್ಷವಾಗಲಿ. ಕಳೆದ ವರ್ಷ ನಮ್ಮಿಂದ ಉಂಟಾದ ಕೊರತೆಗಳು ಮತ್ತು ತಪ್ಪುಗಳು, ಅಲ್ಲಾಹನ ಅಸಂತುಷ್ಟಿಗೆ ಕಾರಣವಾದ ಹಾಗೂ ನಮ್ಮನ್ನು ಕೆಲವು ವರದಾನಗಳಿಂದ ದೂರವಿರಿಸಲು ಕಾರಣವಾದ ಸಂಗತಿಗಳಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ. ಅಲ್ಲಾಹನ ವರದಾನಗಳ ಮತ್ತು ಅನುಗ್ರಹಗಳ ವಾರಸುದಾರರನ್ನಾಗಿ ನಮ್ಮನ್ನು ಮಾಡಲಿ. ಅಲ್ಲಾಹನು ನಮ್ಮನ್ನು ನೈಜ ಸತ್ಯವಿಶ್ವಾಸಿಯರನ್ನಾಗಿ ಮಾಡಲಿ. ಅಲ್ಲಾಹನು ನಮಗೆ ಹೀಗೆ ದುಆ ಮಾಡಲು ಸೌಭಾಗ್ಯ ನೀಡಲಿ.

*************

**ವೈಯಕ್ತಿಕ ಮತ್ತು ಸಾಮುದಾಯಿಕ ಪ್ರಗತಿ ಕೇವಲ ಸನ್ನಡತೆಯಿಂದ ಆಗುವುದಿಲ್ಲ, ಬದಲು ಸತ್ಕರ್ಮಗಳಿಂದ ಸಂಭವವಿದೆ.**

**ಮುಸಲ್ಮಾನರು ಈ ತತ್ವವನ್ನು ಅರಿಯಲಿಲ್ಲ ಮತ್ತು ಯವ ಸಮಯದಲ್ಲಿ ಇಸ್ಲಾಮ್ ಧರ್ಮದ ಪ್ರಗತಿಗೋಸ್ಕರ ಜಾಣ್ಮೆಯುಕ್ತ ಬೌದ್ಧಿಕ ಜಿಹಾದಿನ ಅವಶ್ಯಕತೆ ಇತ್ತು ಅಂತಹ ಸಮಯದಲ್ಲಿ ಅವರ ಧಾರ್ಮಿಕ ಮಹಾಪುರುಷರು 'ಮುಸಲ್ಲಾ' (ನಮಾಝ್ ನಿರ್ವಹಿಸಲು ಉಪಯಗಿಸುವ ಹಾಸಿಕೆ) ಹಾಯಿಸಿ ಮಂತ್ರಮಾಲೆಗಳನ್ನು (ತಸ್ಬೀಹ್) ಕೈಯಲ್ಲಿ ಹಿಡಿದುಕೊಂಡು ಮನೆಯಲ್ಲಿ ಕುಳಿತುಕೊಂಡರು. ಪರಿಣಾಮವೇನಾಯಿತು ಎಂದರೆ ಅವರ ಆರಾಧನೆಗಳು (ನಮಾಝ್) ಮತ್ತು ವ್ರತಗಳು (ರೋಝ) ಇಸ್ಲಾಂ ಹಾಗೂ ಮುಸ್ಲಿಮರನ್ನು ವಿನಾಶದಿಂದ ರಕ್ಷಿಸಲು ಸಾಧ್ಯವಾಗಲಿಲ್ಲ.**

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಪವಿತ್ರ ಖುರ್‌ಆನಿನ ಅಧ್ಯಾಯ ಯೂನುಸ್ ವಚನ 5, **ಲಿಯಜ್ರಿಯಲ್ಲಝೀನ ಆಮನೂ ವ ಅಮಿಲುಸ್ಸಾಲಿಹಾತಿ ಬಿಲ್‌ಖಿಸ್ತ್** ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

ಈ ವಚನದಲ್ಲಿ **"ಅಮಲೇ ಸಾಲಿಹ"** ಎಂಬ ಪದಗಳು ಬಳಕೆಯಾಗಿವೆ. ಅದರಲ್ಲಿ ವೈಯಕ್ತಿಕ ಮತ್ತು ಸಾಮುದಾಯಕ ಪ್ರಗತಿಗೆ ಬೇಕಾಗುವ ಒಂದು ಬಹುಪಯುಕ್ತ ತತ್ವ ಅಡಗಿದೆ. ಜನರು ಅದರ ಅರ್ಥ ಒಳ್ಳೆಯ ನಡತೆ ಎಂದು ಭಾವಿಸುತ್ತಾರೆ. ಆದರೆ ಅದರ ಅರ್ಥ ಒಳ್ಳೆಯ ನಡತೆ ಅಷ್ಟೇ ಅಲ್ಲ. ಬದಲು ಸಮಯಕ್ಕೆ ತಕ್ಕುದಾದ ಸನ್ನಡತೆ ಎಂದಾಗಿದೆ. ಅಂದರೆ ಕರ್ಮವು ಒಳ್ಳೆಯದು ಅಗಿರಬೇಕು ಮತ್ತು ಸಮಯಕ್ಕನುಗುಣವಾಗಿರಬೇಕು. ಉದಾಹರಣೆಗೆ ಯುದ್ಧಕ್ಕೆ ಹೊರಟಿದ್ದಾನೆ, ವ್ರತವೂ ಹಿಡಿದಿದ್ದಾನೆ. ವ್ರತ ಹಿಡಿಯುವುದು ಖಂಡಿತವಾಗಿಯೂ ಒಂದು ಪುಣ್ಯದ ಕೆಲಸ. ಆದರೆ ಯುದ್ಧಕ್ಕೆ ಹೋಗುವ ಸಮಯ ಆ ಕರ್ಮವು ಸರಿಯಾದುದಾಗಿರಲಿಲ್ಲ. ಆ ಕಾರಣದಿಂದಲೇ ಜಿಹಾದಿನ (ಯುದ್ಧ ಸಮಯದಲ್ಲಿ) ಒಂದು ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಹೇಳಿದರು. ಇಂದು ವ್ರತವಿಲ್ಲದವರು ವ್ರತ ಹಿಡಿದವರಿಗಿಂತ ಮೇಲುಗೈ ಸಾಧಿಸಿದ್ದಾರೆ. ಏಕೆಂದರೆ ವ್ರತ ಹಿಡಿದವರಿಗೆ ವ್ರತ ಕಷ್ಟದಿಂದಾಗಿ ಕ್ಯಾಂಪಿನ ವ್ಯವಸ್ಥೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಉಚಿತವಾದುದೇನೆಂದರೆ ವೈಯಕ್ತಿಕ ಮತ್ತು ಸಾಮುದಾಯಕಕ ಪ್ರಗತಿಗೋಸ್ಕರ ಸನ್ನಡತೆ ಅಷ್ಟೇ ಅವಶ್ಯಕವಲ್ಲ. ಬದಲು ಸತ್ಕರ್ಮಗಳ ಅವಶ್ಯತೆಯು ಇರುತ್ತದೆ. ಮುಸಲ್ಮಾನರು ಈ ತತ್ವವನ್ನು ಅರಿಯದ ಕಾರಣ, ಇಸ್ಲಾಮಿಗೆ ತೀವ್ರವಾದ

ಬೌದ್ಧಿಕ ಜಿಹಾದಿನ ಅವಶ್ಯಕತೆ ಇದ್ದಾಗ ಅವರ ಧಾರ್ಮಿಕ ಮಹಾಪುರುಷರು 'ಮುಸಲ್ಲಾ' (ನಮಾಝ್ ನಿರ್ವಹಿಸಲು ಉಪಯಗಿಸುವ ಹಾಸಿಕೆ) ಹಾಯಿಸಿ ಮತ್ತು ಕೈಗಳಲ್ಲಿ ಮಂತ್ರಮಣಿಗಳನ್ನು (ತಸ್ಬೀಹ್) ಹಿಡಿದು ಮನೆಯಲ್ಲಿ ಕುಳಿತುಕೊಂಡಿದ್ದರು. ಸಾಮುದಾಯಿಕ ಪ್ರಗತಿಗೆ ಬೇಕಾದ ಕರ್ಮಗಳ ಬಗ್ಗೆ ಅರಿಯಲಿಲ್ಲ. ಅವರ ಕರ್ತವ್ಯವಾಗಿತ್ತು. ಮುಸಲ್ಮಾನರಲ್ಲಿ ನೈತಿಕ ಬಲ ವೃದ್ಧಿಸಬೇಕಾಗಿತ್ತು. ಅದಕ್ಕಾಗಿ ಸರ್ವ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿತ್ತು. ಮತ್ತು ಆದುನಿಕ ಶಿಕ್ಷಣ ಪಡೆಯಲು ಪ್ರೇರಣೆ ನೀಡಬೇಕಾಗಿತ್ತು ಮತ್ತು ಅವರಲ್ಲಿ ಏಕತೆ ಮೂಡಿಸಬೇಕಾಗಿತ್ತು. ಆದೆರೆ ಅವರು ಇಂತಹದೇನೂ ಮಾಡಲಿಲ್ಲ. ಪರಿಣಾಮವೇನಾಯಿತು ಎಂದರೆ ಅವರ ಆರಾಧನೆಗಳು ವ್ರತಗಳು ಇಸ್ಲಾಂ ಹಾಗೂ ಮುಸಲ್ಮಾನರ ಅವನತಿ ಪಡೆಯಲು ಸಾಧ್ಯವಾಗಲಿಲ್ಲ. ಅದಾಗ್ಯೂ ಅಲ್ಲಾಹನ ವಾಗ್ದಾನವಿತ್ತು. ಸತ್ಕರ್ಮಗೈಯುವವರಿಗೆ ವಿಜಯ ದೊರಕುವುದು. ಆ ಜನರ ಕರ್ಮಗಳು ಧಾರ್ಮಿಕ ರೀತಿಯದ್ದಾಗಿತ್ತೇ ವಿನಃ ಸಾಂದರ್ಭಿಕವಾಗಿ ಹಿತಕರವಾಗಿರಲಿಲ್ಲ. ಆದುದರಿಂದ ಅಲ್ಲಾಹನ ನಿಯಮ ಉಲ್ಲಂಘಿಸಿದ ಕಾರಣ ಅವರೆಲ್ಲರನ್ನು ಸಹ ಮತ್ತು ಇತರರೆಲ್ಲ ಮುಸ್ಲಿಮರಿಗೂ ಸಹ ನಷ್ಟ ಅನುಭವಿಸಬೇಕಾಗಿಯಿತು. **(ತಫ್ಸೀರ್ ಕಬೀರ್, ಸಂಪುಟ–3, ಪುಟ–27, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಲ್ಲಾಹನು ಯಾವುದೇ ನಿರ್ಣಯ ಮಾಡಿ ತೋರಿಸಲಿ, ಹೀಗಿದ್ದರೆ ನಾನು ರಾಜಿಯಾಗುತ್ತೇನೆ. ನನ್ನ ಎಷ್ಟೆಲ್ಲ ಲೌಕಿಕ ಆಸ್ತಿಗಳಿವೆಯೋ ಅಂದರೆ ಭೂಮಿ ಇತ್ಯಾದಿ. ನನ್ನ ಆಸ್ತಿಯಾಗಿದ್ದು ನಾನು ಸುಳ್ಳುಗಾರನೆಂದು ಸಾಬೀತಾದರೆ ಅದೆಲ್ಲ ಪಾದರಿ ಅಥವ ಪಂಡಿತನಿಗೆ ಒಪ್ಪಿಸುವೆನು. ಅವರ ಸುಳ್ಳು ಬಹಿರಂಗಗೊಂಡರೆ ಇಸ್ಲಾಮ್ ಧರ್ಮ ಸ್ವೀಕೃತಿಯ ಹೊರತು ಏನು ಅವರಿಂದ ಬೇಡುವುದಿಲ್ಲ. ಈ ಮಾತು ನಾನು ದೃಢ ನಿಮಿತ್ತದಿಂದ ಹೇಳುತ್ತಿದ್ದೇನೆ. ಮತ್ತು ಮನಃಪೂರ್ವಕವಾಗಿ ವಿವರಿಸುತ್ತಿದ್ದೇನೆ. ಮತ್ತು ಅಲ್ಲಾಹ ಆಣೆ ನಾನು ಅವರನ್ನು ಎದುರಿಸಲು ಸಿದ್ಧನಿದ್ದೇನೆ. ಮತ್ತು ಜಾಹೀರಾತು ನೀಡಲು ಸಿದ್ಧ. ಬದಲು ನಾನಂತೂ ಈಗಾಗಲೇ ಹನ್ನೆರಡು ಸಾವಿರ ಜಾಹಿರಾತು ಪ್ರಕಟಿಸಿದ್ದೇನೆ. ಕರೆ ನೀಡುತ್ತಾ ನೀಡುತ್ತಾ ದಣಿದಿದ್ದೇನೆ. ಆದರೆ ಯಾವ ಪಂಡಿತರಾಗಲಿ, ಫಾದರಿಯಾಗಲಿ ಸತ್ಯವನ್ನು ತಿಳಿಯಲು ಮುಂದೆ ಬಂದಿಲ್ಲ. ನನ್ನ ಸತ್ಯತೆಗೆ ಇದಕ್ಕಿಂತ ಮಿಗಿಲಾದ ಪುರಾವೇ ಏನಿದೆ. ನಾನು ಪ್ರತಿಪಾದಿಸಲು ಸದಾ ಸಿದ್ಧ. ನನ್ನ ಎದುರಿಗೆ ಯಾವುದೆ ದೃಷ್ಟಾಂತ ತೋರಿಸುವ ದಾವೆ ಮಾಡದಿದ್ದರೂ ಪಂಡಿತ ಆಥವ ಪಾದರಿಯೊಬ್ಬರು ಕೇವಲ ಪತ್ರಿಕೆಯ ಮೂಲಕ ಪ್ರಕಟಪಡಿಸಲಿ. ನಾನು ಏಕಪಕ್ಷೀಯವಾಗಿ ಯಾವುದಾದರೊಂದು ಅಸಾಧಾರಣ ದೃಷ್ಟಾಂತ ನೋಡಲು ಸಿದ್ಧನಿದ್ದೇನೆ ಎಂದು. ಅದು ಬಹಿರಂಗಗೊಂಡಾಗ ನಾನು ಎದುರಿಸಲು ವಿಫಲಗೊಂಡರೆ ತಕ್ಷಣದಿಂದ ಇಸ್ಲಾಂ ಧರ್ಮ ಸ್ವೀಕರಿಸುವೆನು ಎಂದಾದರೆ ನನಗೆ ಈ ವಾದ ಮಂಜೂರಾಗಿದೆ. ಯಾರಾದರೂ ಮುಸ್ಲಿಮರಲ್ಲಿ ಈ ಸಾಹಸ ತೋರಿಸುವಂತಾಗಲಿ ಯಾವ ವ್ಯಕ್ತಿಯನ್ನು ನೀವು ಧರ್ಮಭ್ರಷ್ಟ ಕಾಫಿರ್ ದಜ್ಜಾಲ್ ಎನ್ನುತ್ತೀರಿ. ಫಾದರಿಗಳ ವಿರುದ್ಧ ಸ್ಪರ್ಧೆ ಒಡ್ಡಿ ನೋಡಲಿ, ನೀವು ಕೇವಲ ಪ್ರೇಕ್ಷಕರಾಗಿ ತಮಾಷೆ ನೋಡಿರಿ.

(5) ಐದನೆ ಕುರುಹು ಈ ವಿನೀತನ ಸತ್ಯತೆಯ ಕುರಿತು ಏನೆಂದರೆ ನಾನು ನನ್ನ ದೈವಿಕ ಸ್ವಪ್ನ ಮತ್ತು ದೇವವಾಣಿಯ ಜ್ಞಾನದ ನೆಲೆಯಲ್ಲಿ ಮುಸಲ್ಮಾನರ ಮೇಲೂ ಮೇಲ್ಮೈ ಪಡೆದಿರುತ್ತೇನೆ. ಅವರಲ್ಲಿ ದೇವವಾಣಿಯ ದಾವೆ ಹೊಂದಿರುವರು ನನ್ನ ಎದುರಿಗೆ ಬರಲಿ ದೈವಿಕ ಪುಷ್ಟಿ ಮತ್ತು ದೈವಿಕ ಅನುಗ್ರಹಗಳಲ್ಲಿ ಮತ್ತು ದೈವಿಕ ದೃಷ್ಟಾಂತಗಳಲ್ಲಿ ನನ್ನ ಮೇಲೆ ಮೇಲ್ಮೈ ಸಾಧಿಸಿದರೆ ಅವರು ಬಯಸಿದಂತೆ ನನ್ನನ್ನು ಝಿಬಹ್ (ಹತ್ಯೆ ಮಾಡಲಿ) ನಾನು ಒಪ್ಪಿಕೊಳ್ಳುತ್ತೇನೆ, ನನಗೆ ಕಾಫಿರ್ ಎಂದು ಹೇಳುವವರು ಅವರೇ ನನ್ನ ಸಂಭೋಧಕರಾಗಿದ್ದಾರೆ. ನನ್ನನ್ನು ಎದುರಿಸಲು ತಾಕತ್ತು ಹೊಂದಿಲ್ಲ ಎಂದಾದರೆ ಬರವಣಿಗೆಯಲ್ಲಿ ಜಾಹೀರಾತು ಪ್ರಕಟಿಸಲಿ. ಅವರು ಅಸಾಧಾರಣವಾದ ಪವಾಡ ನನ್ನಲ್ಲಿ ಕಂಡರೆ ಚಾಚೂ ತಪ್ಪದೆ ನನ್ನ ದಾವೆಯನ್ನು ಸ್ವೀಕರಿಸಲಿ. ನಾನು ಈ ಕಾರ್ಯಾಕ್ಕಾಗಿ ಹಾಜರಿದ್ದೇನೆ. ನನ್ನ ಪ್ರಭೂ ದಯಾಳುವಾದ ಅಲ್ಲಾಹನು ನನ್ನ ಜೊತೆಗಿದ್ದಾನೆ. ಆದರೆ ಈ ಸ್ಪರ್ಧೆ ಅಯಿಮ್ಮತುಲ್ ಕಫ್ರ್ (ಕಾಫಿರ್ ಎಂದು ಫತ್ವಾ ಹೊರಡಿಸುವವರ ಮಿಥ್ಯೆ ಮಾತ್ರ) ಎಂದು ದೇವಾಜ್ಞೆಯಿದೆ. ಅವರೊಡನೆಯೇ ಈ ಸ್ಪರ್ಧೆಯಿದೆ. ಅವರು ಬೇಕಾದರೆ ಎದುರಿಗೆ ಬರಬಹುದು. ಆದರೆ ನೆನಪಿರಲಿ. ಅವರು ಎದುರಿಗೆ ಖಂಡಿತವಾಗಿಯೂ ಬರಲಾರರು. ಏಕೆಂದರೆ ಸತ್ಯದ ಪ್ರತಾಪ ಅವರ ಮೇಲಿದೆ ಮತ್ತು ಅವರು ತನ್ನ ದೌರ್ಜನ್ಯ ಪೀಡೆಯ ಕುರಿತು ಅರಿತಿದ್ದಾರೆ. ಆದುದರಿಂದ ಖಂಡಿತವಾಗಿಯೂ ಅವರು ಎದುರಿಗೆ ಬರಲಾರರು. ಆದರೆ ನನ್ನ ಕಡೆಯಿಂದ ಅತಿ ಶೀಘ್ರದಲ್ಲಿ "ದಾಫೆಉಲ್ ವಸಾವಿಸ್" ಗ್ರಂಥದಲ್ಲಿ ಅವರ ಹೆಸರುಗಳನ್ನು ಪ್ರಕಟಿಸಲಿದ್ದೇನೆ.

ಜನಸಾಮಾನ್ಯರು ಅವರು ಇಮಾಮರು ಅಲ್ಲ, ಮತಪಂಡಿತರು ಅಲ್ಲ ಮತ್ತು ಅವರು ಯಾವ ಫತ್ವಾ ಹೊರಡಿಸಲಿಲ್ಲ. ಅವರಿಗಾಗಿ ನನ್ನೊಂದಿಗೆ ಆಜ್ಞೆಯಿದೆ. ಅವರು ಪವಾಡವನ್ನು ನೋಡಬಯಸುವುದಾದರೆ ನನ್ನ ಸಂಗತಿಯಲ್ಲಿ ಇರಲಿ, ಅಲ್ಲಾಹ್ ನಿರಪೇಕ್ಷನು ನಯ, ವಿನಯ, ನಿಷ್ಠೆ ಕಾಣುವವನೆಡೆ ವಾಲುವುದಿಲ್ಲ. ಆದರೆ ಅವನು ಈ ವಿನೀತನನ್ನು ವ್ಯರ್ಥಗೊಳಿಸುವುದಿಲ್ಲ ಮತ್ತು ತನ್ನ ನ್ಯಾಯಪೂರ್ತಿಕರಣ ಮಾಡಿಯೇ ಸಿದ್ಧನಾಗುವುದು. ತಡಮಾಡದೇ ತನ್ನ ದೃಷ್ಟಾಂತಗಳನ್ನು ತೋರಿಸುವನು, ಆದರೆ ದೃಷ್ಟಾಂತವನ್ನು ನೋಡುವ ಮುಂಚೆಯೇ ಸ್ವೀಕರಿಸುವವರು ಧನ್ಯರು, ಅವರು ಅಲ್ಲಾಹನ ಪ್ರೀತಿಯ ದಾಸರಲ್ಲಿ ಸೇರುವರು. ಮತ್ತು ಸತ್ಯವಂತರು ಅವರಲ್ಲಿ ಯಾವ ಮೋಸಗಾರಿಕೆ ಇಲ್ಲ ಎಂದಾಯಿತು. ದೃಷ್ಟಾಂತ ಬೇಡುವವರು ವ್ಯಥೆ ಪಡುವವರು ನಮಗೆ ಆ ಸಜ್ಜನರ ರೀತಿಯಲ್ಲಿ ಅವರು ಯಾವ ದೃಷ್ಟಾಂತವನ್ನು ಬೇಡಲಿಲ್ಲ. ಆದರೆ ಅಲ್ಲಾಹನ ಸಂತೃಪ್ತಿ ಸಾನಿಧ್ಯ ಪಡೆದರು. ನಮಗೆ ಅ ಭಾಗ್ಯ ದೊರೆಯಲಿಲ್ಲವಲ್ಲ.

ಆದುದರಿಂದ ಈ ಮಾತು ನೆನಪಿಡಬೇಕು. ಅಲ್ಲಾಹನು ಈ ಸಂಘಟನೆಯನ್ನು ಸಾಕ್ಷರಹಿರನ್ನಾಗಿ ಬಿಡುವುದಿಲ್ಲ. ಅವನು ಸ್ವಯಂ ಹೇಳಿದನು. ಅದು ಬರಾಹಿನೇ ಅಹ್ಮದಿಯಾದಲ್ಲಿ ಬರೆಯಲ್ಪಟ್ಟಿದೆ. "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಬಂದನು. ಅದರೆ ಲೋಕವು ಅವನನ್ನು ಸ್ವೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಸ್ವೀಕರಿಸುವನು. ಮತ್ತು ಪ್ರಬಲ ಆಕ್ರಮಣಗಳ ಮೂಲಕ ಅವನ ಸತ್ಯತೆ ಬಹಿರಂಗಪಡಿಸುವನು' ಯಾವ ಜನರು ಧಿಕ್ಕರಿಸಿದರು ಮತ್ತು ಧಿಕ್ಕರಿಸಲು ಸಿದ್ಧರಾದವರು ಅವರಿಗಾಗಿ ಅಪಮಾನ ಪರಾಜಯ ಕಾದಿದೆ. ಅವರು ಇಷ್ಟಾದರೂ ಯೋಚಿಸಲಿಲ್ಲ. ಇದು ಮಿಥ್ಯವಾಗಿರುತ್ತಿದ್ದರೆ ನಾನು ಎಂದೋ ನಾಶವಾಗುತ್ತಿದ್ದೆ ಏಕೆಂದರೆ ಅಲ್ಲಾಹನು ಸುಳ್ಳುಗಾರರ ಶತ್ರುವಾಗಿದ್ದಾನೆ. ಆ ಮೂಢರು ಇಷ್ಟು ಭಾವಿಸುವುದಿಲ್ಲ. ಇಂತಹ ದೃಢತೆ ಮತ್ತು ಸಾಹಸ ಯಾವನೇ ಸುಳ್ಳುಗಾರನಿಗೆ ಲಭಿಸುತ್ತದೆಯೇ. ಆ ಮೂರ್ಖರು ಇದು ಸಹ ಅರಿಯುವುದಿಲ್ಲ. ಯಾವ ವ್ಯಕ್ತಿ ಅಗೋಚರ ಶಕ್ತಿಯಿಂದ ಶಕ್ತಿ ಪಡೆದು ವಾದಿಸುತ್ತಿದ್ದಾನೆ. ಅವನ ಮಾತುಗಳಲ್ಲಿ ವಿಶೇಷವಾದ ಘನತೆ ಪ್ರತಾಪವಿದೆ. ಒಬ್ಬಂಟಿಯಾಗಿ ಲೋಕವನ್ನೇ ಎದುರಿಸುವ ಎದೆಗಾರಿಕೆ ಅವನಿಗೆ ಲಭಿಸಿದೆ. ನಿಶ್ಚಯವಾಗಿಯೂ ನೀವು ಕಾಯುತ್ತೀರಿ. ಆ ದಿನಗಳು ಬರುತ್ತಿವೆ. ಬದಲು ಅತ್ಯಂತ ಸಮೀಪದಲ್ಲಿವೆ. ಶತ್ರುಗಳು ಪರಾಜಿತರಾಗುವರು ಮತ್ತು ಮಿತ್ರರು ವಿಜಯಿಗಳಾಗುವರು. ಯಾರು ಮಿತ್ರರು? ದೃಷ್ಟಾಂತಗಳನ್ನು ಅನುಭಸದೇ ಸ್ವೀಕರಿಸಿದವರು ನನ್ನ ಮಿತ್ರರು. ಸಾವಿರಾರು ದೃಷ್ಟಾಂತಗಳ ಅನುಭವ ಪಡೆದವರ ರೀತಿಯಲ್ಲಿ ತಮ್ಮ ಜೀವ ಸಂಪತ್ತು ಮೌನ, ತ್ಯಾಗ ಮಾಡಿದವರೇ ನನ್ನ ಮಿತ್ರರು. ಅದುವೆ ನನ್ನ ಜಮಾಅತ್ (ಸಂಘಟನೆ) ಅವರೇ ನನ್ನವರು. ನನ್ನನ್ನು ಒಬ್ಬಂಟಿಯಾಗಿ ಕಂಡರು ಮತ್ತು ನನಗೆ ಸಹಕರಿಸಿದರು. ನನ್ನನ್ನು ದುಃಖದಲ್ಲಿ ಕಂಡರು ಮತ್ತು ನನ್ನ ದುಃಖದಲ್ಲಿ ಭಾಗಿಯಾದರು. ಅಜ್ಞಾತರಾಗಿಯೂ ಜ್ಞಾನವಂತರಂತೆ ನನ್ನನ್ನು ಆಧರಿಸಿದರು. ಅಲ್ಲಾಹನ ಅನುಗ್ರಹಗಳು 'ಅವರ ಮೇಲಿರಲಿ." (ಅದೇ ಪುಟ 347–349)

ಮುಂದೆ ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಂದ ಪ್ರಸ್ತುತ ಪುಟ ಇನ್ನೊಂದು ಬಹುಮಾನದ ಪಂಥಹ್ವಾನ ನಾವು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

**Love for All, Hatred for None**
**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 04 February 2021, Issue No. 05

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 04ರ ವರದಿಯ ಉಳಿದ ಭಾಗ)**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. "ಕೊನೆಯಲ್ಲಿ ನಾನು ಯುವಕರಿಗೆ ಹೇಳಬಯಸುತ್ತೇನೆ. ಇಸ್ಲಾಮ್ ಧರ್ಮದ ಕುರಿತು ಅಧ್ಯಯನ ನಡೆಸಿರಿ, ಪವಿತ್ರ ಖುರ್‌ಆನ್ ಕೈಯಲೆತ್ತಿಕೊಳ್ಳಿ ಮತ್ತು ಅದರ ಮೇಲೆ ಚಿಂತನೆ ನಡೆಸಿರಿ. ನಾನು ನಿಮಗೆ ಭರವಸೆ ಕೊಡುತ್ತೇನೆ. ಇಸ್ಲಾಮ್, ವಿಜ್ಞಾನ ಧರ್ಮದ ವಿರುದ್ಧವಲ್ಲ. ಯಾವುದೇ ಸತ್ಯಶೋಧನೆ (ವಿಜ್ಞಾನ) ಧರ್ಮದ ವಿರುದ್ಧವಲ್ಲ. ಮತ್ತು ನಿಜವಾದ ಧರ್ಮ ವಿಜ್ಞಾನಕ್ಕೆ ವಿರುದ್ಧವಾಗಿರಲು ಸಾಧ್ಯವಿಲ್ಲ.

ನೀವು ತಮ್ಮ ಧರ್ಮವನ್ನು ಗೌರವಿಸಿರಿ ಮತ್ತು ಅದರ ಮೌಲ್ಯಗಳನ್ನು ಎತ್ತಿಹಿಡಿಯಿರಿ, ತನ್ನೊಳಗೆ ಇಸ್ಲಾಮಿನ ಆತ್ಮವಿರಿಸಿಕೊಳ್ಳಿ, ಆಗ ಎಲ್ಲ ಉಪಾಯಗಳು ಯಶಸ್ವಿಯಾಗುವುದು. ನೀವು ಖುರ್‌ಆನ್ ಗಟ್ಟಿಯಾಗಿ ಹಿಡಿದುಕೊಳ್ಳಿ, ಅದರ ಅಧ್ಯಯನ ಮಾಡಿರಿ, ಚಿಂತನೆಗೈಯಿರಿ. ಅದನ್ನು ಗೌರವಿಸಿರಿ, ಅದರ ವಚನಗಳ ಮೇಲೆ ಹಾಸ್ಯ ಮಾಡದಿರಿ, ಕೇವಲ "ಕುಲು ವಶ್ರಬು" ಅಷ್ಟೇ ನೆನಪಿಡುವುದು, ಬೇಡ ಬದಲು ಧರ್ಮವನ್ನು ಕಲಿಯಿರಿ, ನೆನಪಿಸಿರಿ. ಅದರಲ್ಲಿ ಎಂಥ ಜ್ಞಾನಗಳಿವೆ ಎಂದರೆ ಅದು ಎಲ್ಲ ಲೋಕಗಳನ್ನು ಪರಾಜಿತಗೊಳಿಸುವುದು, ನೀವು ಇಸ್ಲಾಮಿನ ಸತ್ಯವಾದ ನಮೂನೆ ಧಾರಣೆಮಾಡಿಕೊಂಡರೆ ಲೋಕದಲ್ಲಿ ನಿಮಗೆ ಆಧ್ಯಾತ್ಮಿಕ ಮತ್ತು ಭೌತಿಕ ಎರಡರಲ್ಲೂ ಉನ್ನತಿ ದೊರೆಯುವುದು. "ಲಾ ಇಲಾಹ ಇಲ್ಲಲ್ಲಾಹ್" ಘೋಷಣೆ ಮತ್ತೆ ಮೊಳಗುವುದು, ಇಸ್ಲಾಮಿನ ಆಡಳಿತ ಇಂದಿನಿಂದ ಹದಿಮೂರು ವರ್ಷಗಳ ಹಿಂದೆ ಇದ್ದದ್ದು ಮತ್ತೆ ಲೋಕದಲ್ಲಿ ಸ್ಥಾಪನೆಗೊಳ್ಳುವುದು. "ಇನ್‌ಶಾಅಲ್ಲಾಹ್ **(ಅನ್ವಾರುಲ್ ಉಲೂಮ್, ಸಂಪುಟ–9, ಪುಟ–518–519)**

ಕಾರ್ಯಕ್ರಮ ಪ್ರಸ್ತುತಪಡಿಸಿದ ನಂತರ ಹುಝೂರ್ ವಾಖಿಫೀನ್ ನೌ ಬಾಲಕರಿಗೆ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಿದರು.

* ಒಬ್ಬ ವಕ್ಫೆ ನೌ ಬಾಲಕ ಪ್ರಶ್ನೆ ಕೇಳಿದನು. ಹುಝೂರ್ ಪ್ರತಿ ಖುತುಬದಲ್ಲಿ ಹೇಳುತ್ತಾರೆ. ಎಲ್ಲ ಅಹ್ಮದಿಯರು ಜಮಾಅತಿನೊಂದಿಗೆ ತನ್ನ ಸಂಬಂಧ ಮತ್ತು ಪ್ರೀತಿ ದೃಢವಾಗಿರಿಸಿಕೊಳ್ಳಬೇಕಾಗಿದೆ ಎಂದು. ನನ್ನ ಪ್ರಶ್ನೆಯೇನೆಂದರೆ ವಕ್ಫೆ ನೌ ವಿದ್ಯಾರ್ಥಿ ತನ್ನ ಸಂಬಂಧ ಜಮಾಅತಿನೊಂದಿಗೆ ಸ್ಪಷ್ಟಪಡಿಸಲು ಮತ್ತು ದೃಢಪಡಿಸಲು ಏನು ಮಾಡಬೇಕಾಗಬಹುದು?

ಆ ಪ್ರಶ್ನೆಯ ಉತ್ತರ ನೀಡುತ್ತ ಹುಝೂರ್ ಹೇಳಿದರು. ಮೊಟ್ಟ ಮೊದಲು ಮಾಡಬೇಕಾದ ಕಾರ್ಯವೆಂದರೆ ನೀವು ತನ್ನನ್ನು ವಖ್ಫೆ ನೌ ಅನಿಸಿಕೊಂಡವರಾದರೆ, ಭಾವಿಸಿಕೊಂಡವರಾದರೆ, ನಮ್ಮ ತಂದೆ ತಾಯಿಯವರು ಏಕೆ ನಮ್ಮನ್ನು ವಖ್ಫ್ ಮಾಡಿದ್ದಾರೆ ಎಂದು ಯೋಚಿಸಬೇಕು. ಪವಿತ್ರ ಖುರ್‌ಆನ್‌ನ ಈ ವಚನದ ಮೇಲೆ ನಡೆದುಕೊಳ್ಳಲು ಮಾಡಿದ್ದಾರೆ. ಅದರಲ್ಲಿ ಹಝ್ರತ್ ಮರಿಯಮರ ತಾಯಿ ಹೇಳಿದರು. ಏನೆಲ್ಲ ನನ್ನ ಉದರದಲ್ಲಿದೆಯೋ, ನನ್ನ ಹೊಟ್ಟೆಯಲ್ಲಿದೆಯೋ ನಾನು ಅದನ್ನು ನಿನಗಾಗಿ ಅರ್ಪಿಸುತ್ತೇನೆ. (ವಖ್ಫ್ ಮಾಡುತ್ತೇನೆ). ಇದು ಅಲ್ಲಾಹನೊಡನೆ ಹೇಳಿದ್ದು? ಅಂದರೆ ನಿಮ್ಮ ತಾಯಿ ತಂದೆ ನಿಮ್ಮನ್ನು ಅಲ್ಲಾಹನಿಗಾಗಿ ವಖ್ಫ್ ಮಾಡಿದ್ದಾರೆ. ಆಗ ಮೊದಲು ಅರಿಯಬೇಕಾದುದು ಅಲ್ಲಾಹನು ಯಾರು, ಮತ್ತು ಅಲ್ಲಾಹನು ಜನ್ಮದ ಏನು ಉದ್ದೇಶ ಹೇಳಿದ್ದಾನೋ ಅದನ್ನು ತಿಳಿಯಬೇಕು. ಅದು ಯಾವ ಉದ್ದೇಶ? ನನ್ನ ಆರಾಧನೆ ಮಾಡಿರಿ. ಅದಕ್ಕಾಗಿ ಅಲ್ಲಾಹನೊಡನೆ ಸಂಬಂಧ ಬೆಳೆಸಿರಿ ಈ ವಯಸ್ಸಿನಲ್ಲಿ ಮೊದಲು ನೀವು 5 ಹೊತ್ತಿನ ನಮಾಝ್ ಮಾಡಬೇಕು. ಹಲವು ಮಕ್ಕಳು ತಮ್ಮ ಮನೆಯಲ್ಲಿ ಎಷ್ಟು ಹೊತ್ತಿನ ನಮಾಝ್ ಮಾಡುತ್ತಿದ್ದಾರೆ ಎಂಬುದನ್ನು ಸೇರಿಸುತ್ತಾರೆ. ಚಳಿಗಾಲದಲ್ಲಿ ಅಥವಾ ಸೆಕೆಗಾಲದಲ್ಲಿ ಹೆಚ್ಚಿನ ಮಟ್ಟಕ್ಕೆ ಏರಿದರೆ ನಮಾಝುಗಳನ್ನು ಜಮಾ ಮಾಡುತ್ತಾರೆ ಅಥವಾ ನನ್ನ ಪ್ರವಾಸದ ವೇಳೆ ನಮಾಝುಗಳನ್ನು ಜಮಾ ಮಾಡುವುದನ್ನು ನೋಡಿ ಮೂರೆ ಸಲದ ನಮಾಝುಗಳು ಎಂದು ತಿಳಿದುಕೊಳ್ಳುತ್ತಾರೆ. ನೆನಪಿಡಿರಿ, ನಮಾಝುಗಳು 5 ಹೊತ್ತಿನದ್ದೇ ಆಗಿವೆ. ಸಮಯ ಅನುಸಾರವಾಗಿ ಐದು ಹೊತ್ತಿನ ನಮಾಝುಗಳನ್ನು ನಿರ್ವಹಿಸಬೇಕು. ಮೊದಲ ಮಾತೇನೆಂದರೆ ಅಲ್ಲಾಹನೊಂದಿಗೆ ಸಂಬಂಧ ದೃಢವಾಗಿರಲಿ ಮತ್ತು ಧರ್ಮಜ್ಞಾನವನ್ನು ಪಡೆಯಿರಿ. ಪವಿತ್ರ ಖುರ್‌ಆನ್‌ನ್ನು ಓದುತ್ತಿರಿ. ಅದರ ಜ್ಞಾನ ಪಡೆಯಿರಿ. ಅದನ್ನು ಅರಿಯಿರಿ, ಅದರ ಉಪದೇಶಗಳೇನು ಹಲಗೆಯ ಮೇಲಿದೆ. ಅದರಂತೆ ನಡೆಯಲು ಪ್ರಯತ್ನ ಮಾಡಿರಿ, ಒಬ್ಬ ವಖ್ಫೆ ನೌ ಇದನ್ನೇ ಮಾಡಬೇಕಾಗಿದೆ.

* ಒಬ್ಬ ವಖ್ಫೆ ನೌ ಕೇಳಿದನು. ನನ್ನ ಪ್ರಶ್ನೆ ಏನೆಂದರೆ ನಾನು ಒಂದು ಕವನದಿಂದ ಎರಡು ಪ್ರಶ್ನೆಗಳನ್ನು ಹೇಳಬಯಸುತ್ತೇನೆ?

ಹುಝೂರ್ ಮುಗುಳ್ನಗುತ್ತ ಹೇಳಿದರು. ಇದು ಪ್ರಶ್ನೆಯಲ್ಲ, ಉತ್ತರವಾಗಿದೆ, ಮುಗುಳ್ನಗುತ್ತಾ ಹೇಳಿದರು. ಓದಿ ಹೇಳಿರಿ.

ಅವನು ಈ ಕೆಳಗಿನ ಎರಡು ಪಂಕ್ತಿಗಳನ್ನು ಹೇಳಿದನು.

ಸರ್‌ಝುಮೀನ್ ಅರಬ್ ಸೇ ಚಲಿ ರೋಶ್ನಿ
ಆಜ್‌ತಕ್ ಹೈ ಸಫರ್ ಮೇ ವಹಿ ರೋಶ್ನಿ
ಹಮ್ ಪೇ ಇಹ್ಸಾನ್ ಕಿಯಾ ಹೈ ಹುಝೂರ್ ಆಪ್ನೆ
ಹಮ್ ಅಂಧೇರೋಂ ಮೇ ಥೇ ಹಮ್‌ಕೋ ದಿ ರೋಶ್ನಿ

* ಒಬ್ಬ ವಾಖಿಫೆ ನೌ ಪ್ರಶ್ನೆ ಕೇಳಿದನು. ಹಝ್ರತ್ ನುಹ್(ಅ) ಅವರಿಗೆ ಹಡಗು ತಯಾರಿಸಲು ಎಷ್ಟು ಸಮಯ ಹಿಡಿದಿತ್ತು? ಜನರು ಯಾರಾದರೂ ಅವರಿಗೆ ಸಹಾಯ ಮಾಡಿದ್ದಿದೆಯೇ?

ಹುಝೂರ್ ಹೇಳಿದರು. ಸಮಯ ಅಂತೂ ಬರೆದಿಲ್ಲ. ಅವರು ಹಡಗು ತಯಾರು ಮಾಡುತ್ತಿರುವಾಗ ಜನರು ಅಲ್ಲಿಂದ ಹೋಗುತ್ತಿರುವಾಗ, ಪವಿತ್ರ ಖುರ್‌ಆನ್ ಹೇಳುತ್ತದೆ. ಅವರು ನಗುತ್ತಿದ್ದರು, ನಮ್ಮಲ್ಲಿ ಅಂತಹದೇನೂ ಮಳೆಯಿಲ್ಲ. ಏನಿಲ್ಲ, ಹಡಗು ಏಕೆ ತಯಾರು ಮಾಡಬೇಕು ಎಂದು, ಹಝ್ರತ್ ನೂಹ್(ರ) ಅವರಿಗೆ ಉತ್ತರಕೊಟ್ಟರು. ಇಂದು ನೀವು ಎಷ್ಟು ಮೇಲೆ ನಗುತ್ತಿದ್ದೀರಿ, ನಾಳೆ ಇದರ ಪ್ರಾಮುಖ್ಯತೆ ಅರಿವಾದಾಗ ನಾನು ನಿಮ್ಮ ಮೇಲೆ ನಗುವೇನು ಹಡಗು ತಯಾರಿಸಲು ಕೆಲ ಸಮಯ ಅಂತೂ ಹಿಡಿಯಲೇಬೇಕು. ನಿರ್ಧಿಷ್ಠ ಅವಧಿ ತೋರಿಸಲಾರದು.

* ಒಬ್ಬ ವಾಖಿಫೆ ನೌ ಬಾಲಕನು ಪ್ರಶ್ನೆ ಮಾಡಿದನು. ನನ್ನ ಪ್ರಶ್ನೆ ಎಂದರೆ ನನಗೆ ಒಂದು Pen ಕೊಡುವಿರಾ?

ಆಗ ಹುಝೂರ್ ಹೇಳಿದರು. ಇದು ಪ್ರಶ್ನೆಯೇ? ಇದು ಬಹು ದೊಡ್ಡ ಪ್ರಶ್ನೆ ಆಗಿದೆ. ಕುಳಿತುಕೊಳ್ಳಿ. ನಂತರ ಯಾವಾಗ ಬೇಕಾದರೂ ಕಚೇರಿಯಲ್ಲಿ ನನ್ನಿಂದ ತೆಗೆದುಕೊಳ್ಳಿ.

ಒಬ್ಬ ವಾಖಿಫೆ ನೌ ಕೇಳಿದನು ಜಾಮಿಯಾದಲ್ಲಿ ತನ್ನ ಮರ್ಜಿಯಂತೆ ಬಟ್ಟೆ ಏಕೆ ದರಿಸಬಾರದು?

ಆಗ ಹುಝೂರ್ ಹೇಳಿದರು. ಧರಿಸಬಾರದು ಅಂತ ಯಾರು ಹೇಳಿದ್ದು?

ಆಗ ವಖ್ಫೆ ನೌ ಬಾಲಕ ಹೇಳಿದನು. ನಾನು ಜಾಮಿಯಾಕ್ಕೆ ಹೋದಾಗ ಎಲ್ಲರೂ ಒಂದೇ ತರಹದ ಬಟ್ಟೆ ಧರಿಸಿಕೊಂಡಿದ್ದರು.

ಆಗ ಹುಝೂರ್ ಹೇಳಿದರು. ನಿಮ್ಮ ಶಾಲೆಯಲ್ಲಿ ಸಮವಸ್ತ್ರ (Uniform) ಇಲ್ಲವೇ? ಆಗ ಅವನು ಹೇಳಿದನು. ಇಲ್ಲ.

ಹುಝೂರ್ ಹೇಳಿದರು. ನಿಮ್ಮ ಶಾಲೆಗಳಲ್ಲಿ ಸಮವಸ್ತ್ರ ಇರುವುದಿಲ್ಲವೇ? ಹೆಚ್ಚಿನ ಶಾಲೆಗಳಲ್ಲಿ ಸಮವಸ್ತ್ರ (Uniform) ಇರುತ್ತದೆ. ಯು.ಕೆ. ಯಲ್ಲಿ ಹೆಚ್ಚು ಕಡಿಮೆ ಎಲ್ಲ ಶಾಲೆಗಳಿವೆ. ಪಾಕಿಸ್ತಾನದಲ್ಲೂ ಹೆಚ್ಚಿನ ಶಾಲೆಗಳಲ್ಲಿ ಇರುತ್ತದೆ. ಇಲ್ಲಿ ಪಬ್ಲಿಕ್ ಶಾಲೆಗಳಲ್ಲಿ ಬಹುಶಃ ಇಲ್ಲ, ಬಹುಶಃ ಬಡ ಜನರ ಕಾರಣದಿಂದ ಅಥವಾ ಇನ್ನಾವುದೇ ಕಾರಣ ಇರಲಿಕ್ಕಿಲ್ಲ, ಆದರೆ ಖಾಸಗಿ ಶಾಲೆಗಳಲ್ಲಿ, ನನ್ನ ವಿಚಾರದಲ್ಲಿ ಜರ್ಮನಿಯಲ್ಲಿ ಅವರ ಸಮವಸ್ತ್ರವಿರಬೇಕು ಅವರು ತಮ್ಮ ಒಂದು ಗುರುತಿನ ಸಲುವಾಗಿ ಇಟ್ಟಿರುತ್ತಾರೆ. ಒಂದು ನಿಯಮವಿರುತ್ತದೆ. ಯಾವುದಾದರೂ ಒಂದು ಸಮವಸ್ತ್ರ ಜಾಮಿಯಾ ಹುಡುಗರಿಗೆ ಕೊಡಬೇಕಾಗಿತ್ತು. ನನಗೆ ಈ ಸಮವಸ್ತ್ರ ಮೆಚ್ಚುಗೆಯಾಯಿತು. ನಾನು ಹೇಳಿದೆ. ನಿಮಗೆ ಇದು uniform ಆಗಿದೆ. ಇದನ್ನು ಧರಿಸಿರಿ. ಇದೇನು ಧಾರ್ಮಿಕ (ಶರಯಿ) ಸಮಸ್ಯೆ ಅಲ್ಲ. ಒಂದು ಸಾಂಸ್ಥಿಕ ಸಮಸ್ಯೆಯಾಗಿದೆ.

* ಒಬ್ಬ ಬಾಲಕ ಕೇಳಿದನು. ನಾನು ಕವನದ ಎರಡು ಪಂಕ್ತಿಗಳನ್ನು ಓದಬಹುದೇ. ಏಕೆಂದರೆ ನನ್ನ ಅಜ್ಜನಿಗೆ ಮಾತುಕೊಟ್ಟು ಬಂದಿದ್ದೇನೆ.

ಆಗ ಹುಝೂರ್ ಹೇಳಿದರು. ಮಾತಿಗೆ ತಪ್ಪಿದರೆ ಏನು ಹೇಳುತ್ತಿದ್ದರು, ಹೊಡೆಯುತ್ತೇನೆ ಅಂದರು? ಆಯಿತು ಓದಿ.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.